# ಕನ್ನಡ
# ಸುಗಮಭಾರತಿ

ಎಂಟನೆಯ ಇಯತ್ತೆ



## ಶಿಕ್ಷಕ ಹಾಗೂ ಪಾಲಕರಿಗಾಗಿ ಸರ್ವಸಾಮಾನ್ಯ ಸೂಚನೆಗಳು

೧) ವಿಶಿಷ್ಟ ಕಾಲಾವಧಿಯಲ್ಲಿ ವಿದ್ಯಾರ್ಥಿಗಳು ಲಕ್ಷ್ಯಪೂರ್ವಕವಾಗಿ ಶ್ರವಣ ಮಾಡುವುದು ಮತ್ತು ಶ್ರವಣ ಮಾಡಿದುದರ ಯೋಗ್ಯ ಆಕಲನ ಮಾಡುವುದು.

೨) ತಮ್ಮ ವಿಚಾರ, ಭಾವನೆ, ಕಲ್ಪನೆ, ಇಚ್ಛೆ ಮತ್ತು ಅನುಭವಗಳನ್ನು ಸ್ಪಷ್ಟ ಮತ್ತು ಸಮರ್ಪಕ ಶಬ್ದಗಳಲ್ಲಿ ಮೌಖಿಕವಾಗಿ ವ್ಯಕ್ತಮಾಡಲು ಬರುವುದು.

೩) ವಿವಿಧ ಪ್ರಸಂಗಗಳಲ್ಲಿ ಆತ್ಮವಿಶ್ವಾಸಪೂರ್ವಕವಾಗಿ ಮಾತನಾಡಲು ಬರುವದು, ಸಂವಾದ ಸಾಧಿಸಲು ಬರುವದು, ಅದರಂತೆ ಪ್ರಸಂಗಾನುಸಾರವಾಗಿ ಯೋಗ್ಯ ಭಾಷೆಯ ಉಪಯೋಗ ಮಾಡಲು ಬರುವುದು.

೪) ಯೋಗ್ಯ ರೀತಿಯಿಂದ ಮೌನವಾಚನ ಮಾಡಲು ಬರುವದು ಹಾಗೂ ಮಾಡಿದ ವಾಚನದ ಯೋಗ್ಯ ಆಕಲನವಾಗುವುದು.

೫) ವಿರಾಮ ಚಿಹ್ನೆಗಳನ್ನು ಉಪಯೋಗಿಸಿ ಲೇಖನದ ನಿಯಮಾನುಸಾರ ಅಚ್ಚುಕಟ್ಟಾಗಿ ಲೇಖನ ಮಾಡಲು ಬರುವುದು.

೬) ತಮ್ಮ ವಿಚಾರ, ಅನುಭವ, ಭಾವನೆ ಇತ್ಯಾದಿಗಳು ಪರಿಣಾಮಕಾರಕ ರೀತಿಯಿಂದ ವ್ಯಕ್ತಪಡಿಸುವ ಸಲುವಾಗಿ ಅವಶ್ಯಕ ಲೇಖನ ಕೌಶಲಗಳು ಪ್ರಾಪ್ತವಾಗುವವು.

೭) ಭಾಷೆಯ ಆಗು-ಹೋಗುಗಳ ಬಗ್ಗೆ ತಿಳಿದುಕೊಳ್ಳುವುದು.

೮) ವಿವಿಧ ಸಾಹಿತ್ಯ ಪ್ರಕಾರಗಳ ಆಸ್ವಾದನೆ ಮಾಡಿಕೊಳ್ಳುವ ಕ್ಷಮತೆ ವಿಕಸಿತವಾಗುವುದು.

೯) ಸೃಜನಶೀಲ ಅಭಿವ್ಯಕ್ತಿಯ ವಿಕಾಸವಾಗುವುದು.

೧೦) ಭಾಷೆಯ ಮಾಧ್ಯಮದ ಮೂಲಕ ವಿಚಾರಗಳ ವಿಕಾಸವಾಗುವುದು.


೧೧) ಭಾಷೆ ಹಾಗೂ ಸಾಹಿತ್ಯದ ಅಭ್ಯಾಸದ ಮೂಲಕ ವ್ಯಕ್ತಿತ್ವ ವಿಕಾಸವಾಗುವುದು.

ಮೇಲೆ ನಿರ್ದೇಶಿಸಿದ ಅಭ್ಯಾಸಕ್ರಮದಲ್ಲಿಯ ಸರ್ವಸಾಮಾನ್ಯ ಉದ್ದೇಶಗಳಿಗನುಸಾರವಾಗಿ ಪ್ರಾಥಮಿಕ ಸ್ತರದಲ್ಲಿಯ ಭಾಷಾ ಪಠ್ಯಪುಸ್ತಕದ ಮುಖಾಂತರ ವಿದ್ಯಾರ್ಥಿಗಳಲ್ಲಿ ಭಾಷೆಯ ಎಲ್ಲ ಕೌಶಲಗಳನ್ನು ವಿಕಾಸ ಮಾಡುವುದಿದೆ. ಅದರಂತೆ ಶಾಲೆಯಲ್ಲಿ ದೊರೆತ ಜ್ಞಾನದ ಉಪಯೋಜನೆ ವಿದ್ಯಾರ್ಥಿಗಳಿಗೆ ಪ್ರತ್ಯಕ್ಷ ಜೀವನದಲ್ಲಿ ಆಗಬೇಕೆಂದು ಭಾಷಿಕ ಕೌಶಲಗಳನ್ನು ಮತ್ತು ಜೀವನ ಕೌಶಲಗಳನ್ನು ಹೊಂದಾಣಿಕೆ ಮಾಡಲು ಬರುವುದು ಅವಶ್ಯಕವಾಗಿದೆ. ಈ ದೃಷ್ಟಿಯಿಂದ ಅಭ್ಯಾಸಕ್ರಮದಲ್ಲಿ ಕೆಳಗಿನ ಜೀವನಕೌಶಲಗಳನ್ನು ನಮೂದಿಸಲಾಗಿದೆ.

೧) ಸ್ವತಃದ ಅರಿವು - Self-awareness
೨) ಸಮಾನಾನುಭೂತಿ - Empathy
೩) ನಿರ್ಣಯ ಕ್ಷಮತೆ - Decision making
೪) ಸಮಸ್ಯೆ ಪರಿಹಾರ - Problem solving
೫) ಪರಿಣಾಮಕಾರಕ ಸಂಪರ್ಕ - Effective communication
೬) ವ್ಯಕ್ತಿ-ವ್ಯಕ್ತಿಗಳಲ್ಲಿಯ ಸಹಸಂಬಂಧ - Interpersonal relations
೭) ಸೃಜನಶೀಲ ವಿಚಾರ - Creative thinking
೮) ಚಿಕಿತ್ಸಾತ್ಮಕ ವಿಚಾರ - Critical thinking
೯) ಭಾವನೆಗಳ ಹೊಯ್ದಾಟದೊಂದಿಗೆ ಹೊಂದಾಣಿಕೆ - Coping with emotions
೧೦) ಮಾನಸಿಕ ಒತ್ತಡದ ಪರಿಹಾರ - Coping with stress

ಮೇಲಿನ ಜೀವನಕೌಶಲಗಳು ಈ ಪಠ್ಯಪುಸ್ತಕದಲ್ಲಿಯ ಅನೇಕ ಪಾಠಗಳಲ್ಲಿ ಬಂದಿವೆ. ಯಾವ ಪಾಠದಲ್ಲಿ ಜೀವನ ಕೌಶಲಗಳು ಪ್ರತಿಬಿಂಬಿತವಾಗಿವೆಯೋ ಆ ಪಾಠದ ಕೊನೆಯಲ್ಲಿ ಅವುಗಳನ್ನು ಕೊಡಲಾಗಿದೆ. ಶಿಕ್ಷಕರು ಈ ಸಂಗತಿಗಳನ್ನು ಗಮನದಲ್ಲಿಟ್ಟುಕೊಂಡು ಅಧ್ಯಾಪನ ಮಾಡಬೇಕು ಮತ್ತು ವಿದ್ಯಾರ್ಥಿಗಳಿಂದ ಆ ಅಭ್ಯಾಸಗಳನ್ನು ಮಾಡಿಸಿಕೊಳ್ಳಬೇಕು.

ಸರಕಾರದ ಅನುಮತಿ ಕ್ರಮಾಂಕ : ಪ್ರಶಿಸಂ/೨೦೦೮-೨೦೦೯/ಮಂಜೂರಿ-ಕಸುಬಾ/೫೦೫(೧೨)/೪೭
ದಿನಾಂಕ : ೨೯.೧೨.೨೦೦೮



# ಕನ್ನಡ
# ಸುಗಮಭಾರತಿ
## ಎಂಟನೆಯ ಇಯತ್ತೆ

ಮಹಾರಾಷ್ಟ್ರ ರಾಜ್ಯ ಪಾಠ್ಯಪುಸ್ತಕ ನಿರ್ಮಿತಿ ಮತ್ತು ಅಭ್ಯಾಸಕ್ರಮ ಸಂಶೋಧನ ಮಂಡಳ,
ಪುಣೆ-೪೧೧ ೦೦೪.

ಪ್ರಥಮಾವೃತ್ತಿ : ೨೦೦೯

© ಮಹಾರಾಷ್ಟ್ರ ರಾಜ್ಯ ಪಾಠ್ಯಪುಸ್ತಕ ನಿರ್ಮಿತಿ ಮತ್ತು ಅಭ್ಯಾಸಕ್ರಮ ಸಂಶೋಧನ ಮಂಡಳ, ಪುಣೆ - ೪

ಮಹಾರಾಷ್ಟ್ರ ರಾಜ್ಯ ಪಾಠ್ಯಪುಸ್ತಕ ನಿರ್ಮಿತಿ ಮತ್ತು ಅಭ್ಯಾಸಕ್ರಮ ಸಂಶೋಧನ ಮಂಡಳವು ಈ ಪುಸ್ತಕದ ಎಲ್ಲ ಹಕ್ಕುಗಳನ್ನು ಕಾಯ್ದಿರಿಸಿದೆ. ಮಹಾರಾಷ್ಟ್ರ ರಾಜ್ಯ ಪಾಠ್ಯಪುಸ್ತಕ ನಿರ್ಮಿತಿ ಮತ್ತು ಅಭ್ಯಾಸಕ್ರಮ ಸಂಶೋಧನ ಮಂಡಳದ ಸಂಚಾಲಕರ ಲಿಖಿತ ಅನುಮತಿ ಇಲ್ಲದೆ ಈ ಪುಸ್ತಕದ ಯಾವುದೇ ಭಾಗವನ್ನು ಉದ್ಧೃತ ಗೊಳಿಸಬಾರದು.

ಸಂಪಾದಕ ಮಂಡಳಿ : ಶ್ರೀ. ಕೆ. ಕೆ. ಗಡ
ಶ್ರೀ. ಡಿ. ಆರ್. ದೇಶಪಾಂಡೆ
ಶ್ರೀ. ಎಂ. ಎಸ್. ಜಲದೆ
ಶ್ರೀ. ಆರ್. ಡಿ. ಪವಾರ
ಶ್ರೀಮತಿ ಮಹಾದೇವಿ ಪಾಚ್ಚಾಪೂರೆ
ಡಾ॥ ಸದಾನಂದ ಎಂ. ಬಿಳ್ಳೂರ, ಸಮನ್ವಯಕರು

ಸಂಯೋಜನ ಪ್ರಮುಖ : ಡಾ॥ ಸದಾನಂದ ಎಂ. ಬಿಳ್ಳೂರ,
ವಿಶೇಷಾಧಿಕಾರಿಗಳು ಕನ್ನಡ,
ಮಹಾರಾಷ್ಟ್ರ ರಾಜ್ಯ ಪಾಠ್ಯಪುಸ್ತಕ ನಿರ್ಮಿತಿ ಮತ್ತು ಅಭ್ಯಾಸಕ್ರಮ ಸಂಶೋಧನ ಮಂಡಳ, ಪುಣೆ-೪.

ವಿಷಯ ಸಹಾಯಕ : ಶ್ರೀ. ಆರ್. ಎಮ್. ಗಣಾಚಾರಿ

ಚಿತ್ರಕಾರ : ಶ್ರೀ. ರಾಜೇಂದ್ರ ಗಿರಧಾರಿ

ಮುಖಪುಟ : ಶ್ರೀ. ರಾಜೇಂದ್ರ ಗಿರಧಾರಿ

ಅಕ್ಷರ ಜೋಡಣೆ : ಪಾಠ್ಯಪುಸ್ತಕ ಮಂಡಳ, ಪುಣೆ-೪

ನಿರ್ಮಿತಿ : ಶ್ರೀ. ಸಚ್ಚಿದಾನಂದ ಆಫಳೆ, ಮುಖ್ಯ ನಿರ್ಮಿತಿ ಅಧಿಕಾರಿ
ಶ್ರೀ. ಸಂಜಯ ಕಾಂಬಳೆ, ನಿರ್ಮಿತಿ ಅಧಿಕಾರಿ
ಶ್ರೀ. ಸಂದೀಪ ಅಜಗಾಂವಕರ, ನಿರ್ಮಿತಿ ಸಹಾಯಕ

ಕಾಗದ : ೭೦ ಜಿ. ಎಸ್. ಎಮ್. ಕ್ರಿಮವೋವ್

ಮುದ್ರಣಾದೇಶ N/TECH - 2009-10 5,000

ಮುದ್ರಕ **Printek Graphix (India) Pvt. Ltd.**

ಪ್ರಕಾಶಕ : ಶ್ರೀ. ವಿವೇಕ ಗೋಸಾವಿ, ನಿಯಂತ್ರಕ,
ಪಾಠ್ಯಪುಸ್ತಕ ನಿರ್ಮಿತಿ ಮಂಡಳ, ಪ್ರಭಾದೇವಿ, ಮುಂಬಯಿ-೨೫.

# ಭಾರತದ ಸಂವಿಧಾನ

## ಪ್ರಸ್ತಾವನೆ

ಭಾರತದ ಪ್ರಜೆಗಳಾದ ನಾವು ಭಾರತವನ್ನು ಒಂದು ಸಂಪೂರ್ಣ
ಪ್ರಭುತ್ವ ಸಂಪನ್ನ ಲೋಕತಂತ್ರಾತ್ಮಕ ಗಣರಾಜ್ಯವಾಗಿ
ವ್ಯವಸ್ಥೆಗೊಳಿಸುವುದಕ್ಕಾಗಿಯೂ, ಭಾರತದ ಸಮಸ್ತ ನಾಗರಿಕರಿಗೆ ;
ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ನ್ಯಾಯವೂ,
ವಿಚಾರ, ಅಭಿವ್ಯಕ್ತಿ , ವಿಶ್ವಾಸ, ಧರ್ಮ
ಮತ್ತು ಉಪಾಸನಾ ಸ್ವಾತಂತ್ರ್ಯವೂ,
ಸ್ಥಾನಮಾನ ಮತ್ತು ಅವಕಾಶ ಸಮತೆಯೂ,
ದೊರೆಯುವಂತೆ ಮಾಡುವುದಕ್ಕಾಗಿಯೂ,
ವ್ಯಕ್ತಿಗೌರವವನ್ನೂ, ರಾಷ್ಟ್ರದ ಏಕತೆಯನ್ನೂ ಸುನಿಶ್ಚಿತವಾಗಿ
ನೆಲೆಗೊಳಿಸುವಂಥ ಬಂಧುಭಾವನೆಯನ್ನು
ಎಲ್ಲರಲ್ಲೂ ವೃದ್ಧಿಗೊಳಿಸುವುದಕ್ಕಾಗಿಯೂ ;
ದೃಢಸಂಕಲ್ಪ ಮಾಡಿದವರಾಗಿ
ನಮ್ಮ ಸಂವಿಧಾನ ಸಭೆಯಲ್ಲಿ
ಈ ೧೯೪೯ ನೆಯ ಇಸವಿ ನವೆಂಬರು ತಿಂಗಳು ಇಪ್ಪತ್ತಾರನೆಯ
ತಾರೀಖಾದ ಇಂದಿನ ದಿವಸ ಈ ಮೂಲಕ ಈ ಸಂವಿಧಾನವನ್ನು
ಅಂಗೀಕರಿಸಿ ಅಧಿನಿಯಮಿತಗೊಳಿಸಿ ಆತ್ಮಾರ್ಪಿತ ಮಾಡಿಕೊಂಡಿದ್ದೇವೆ.

# ಪ್ರತಿಜ್ಞೆ

ಭಾರತ ನನ್ನ ದೇಶ. ಭಾರತೀಯರೆಲ್ಲರೂ ನನ್ನ ಬಂಧು - ಭಗಿನಿಯರು.

ನಾನು ನನ್ನ ದೇಶವನ್ನು ಪ್ರೀತಿಸುತ್ತೇನೆ. ನನಗೆ ನನ್ನ ದೇಶದ ಸಮೃದ್ಧವಾದ ಹಾಗೂ ಬಹುವಿಧವಾದ ಪರಂಪರೆಯ ಬಗ್ಗೆ ಅಭಿಮಾನವಿದೆ. ಈ ಪರಂಪರೆಗೆ ತಕ್ಕವನಾಗಿರಲು ನಾನು ಯಾವಾಗಲೂ ಯತ್ನಿಸುತ್ತೇನೆ.

ನಾನು ನನ್ನ ತಾಯಿ-ತಂದೆ, ಗುರು-ಹಿರಿಯರನ್ನು ಆದರಿಸುತ್ತೇನೆ ಮತ್ತು ಎಲ್ಲರೊಡನೆ ಸೌಜನ್ಯದಿಂದ ನಡೆದುಕೊಳ್ಳುತ್ತೇನೆ.

ನಾನು ನನ್ನ ದೇಶ ಹಾಗೂ ನನ್ನ ದೇಶ ಬಾಂಧವರಲ್ಲಿ ನಿಷ್ಠೆ ಇಡುವೆನೆಂದು ಪ್ರತಿಜ್ಞೆ ಮಾಡುತ್ತೇನೆ. ಅವರ ಕಲ್ಯಾಣ ಹಾಗೂ ಉತ್ಕರ್ಷ ಇವುಗಳಲ್ಲಿಯೇ ನನ್ನ ಸುಖವುಂಟು.

# ಪ್ರಸ್ತಾವನೆ

'ಪ್ರಾಥಮಿಕ ಶಿಕ್ಷಣ ಅಭ್ಯಾಸಕ್ರಮ-೨೦೦೪' ಸರಕಾರಮಾನ್ಯ ಈ ಅಭ್ಯಾಸಕ್ರಮಕ್ಕನುಗುಣವಾಗಿ ಇಯತ್ತೆ ೫ ರಿಂದ ೮ನೆಯ ವರೆಗಿನ ಹೊಸ ಪಠ್ಯಪುಸ್ತಕಗಳನ್ನು ಅನುಕ್ರಮವಾಗಿ ಸಿದ್ಧಗೊಳಿಸುವ ಕಾರ್ಯವನ್ನು ಶೈಕ್ಷಣಿಕ ವರ್ಷ ೨೦೦೬-೦೭ ರಿಂದ ಪಾಠ್ಯಪುಸ್ತಕ ಮಂಡಳವು ಕೈಗೆತ್ತಿಕೊಂಡಿದೆ. ಪ್ರಸ್ತುತ ಈ ಮಾಲೆಯ 'ಕನ್ನಡ ಸುಗಮಭಾರತಿ ಎಂಟನೆಯ ಇಯತ್ತೆ' ಈ ಪಠ್ಯಪುಸ್ತಕವನ್ನು ಹೊಸ ಅಭ್ಯಾಸಕ್ರಮಕ್ಕನುಗುಣವಾಗಿ ತಯಾರಿಸಲಾಗಿದೆ.

ಇಂಗ್ಲಿಷ ಮಾಧ್ಯಮದಲ್ಲಿ ಇಯತ್ತೆ ೫ ರಿಂದ ೮ ನೆಯ ವರ್ಗಕ್ಕಾಗಿ ಪುನರ್‌ರಚಿತ ಅಭ್ಯಾಸಕ್ರಮದಲ್ಲಿ ಸದ್ಯದ ಭಾಷಾ ವಿಷಯದ ಅಭ್ಯಾಸ ಯೋಜನೆಯಲ್ಲಿ ಕೆಲವು ಬದಲಾವಣೆ ಮಾಡಿದೆ. ಇಯತ್ತೆ ೫ ರಿಂದ ೮ ನೆಯ ವರ್ಗದ ವಿದ್ಯಾರ್ಥಿಗಳಿಗಾಗಿ ಅವರ ಮಾತೃಭಾಷೆಯನ್ನು ಅಭ್ಯಾಸ ಮಾಡಲು ಬರಬೇಕೆಂಬ ದೃಷ್ಟಿಯಿಂದ ಹಿಂದಿ ದ್ವಿತೀಯ ಭಾಷೆ (ಸಂಪೂರ್ಣ) ಇದರ ಹೊರತಾಗಿ ಹಿಂದಿಯ ಜೊತೆಗೆ ಇತರ ಕೆಲವು ಆಧುನಿಕ ಭಾರತೀಯ ಭಾಷೆಗಳನ್ನು ಸಂಯುಕ್ತ ಸ್ವರೂಪದಲ್ಲಿ ಅಭ್ಯಾಸ ಮಾಡುವ ಅನುಕೂಲತೆಯನ್ನು ಉಪಲಬ್ಧ ಮಾಡಿಕೊಡಲು ಅನುಮತಿ ನೀಡಲಾಗಿದೆ.

ಇಂಗ್ಲಿಷ ಮಾಧ್ಯಮದ ಶಾಲೆಗಳಲ್ಲಿ ಬೇರೆ ಬೇರೆ ಮಾತೃಭಾಷೆ ಇರುವ ವಿದ್ಯಾರ್ಥಿಗಳಿಗೆ ಅವರ ಮಾತೃಭಾಷೆಯ ಅರಿವು ಆಗಬೇಕು. ಮಾತೃಭಾಷೆಯಲ್ಲಿ ಸರಿಯಾಗಿ ಮಾತನಾಡಲು ಮತ್ತು ಬರೆಯಲು ಬರಬೇಕೆಂಬ ಸೀಮಿತ ಅಪೇಕ್ಷೆಯನ್ನು ಈ ಪುಸ್ತಕ ಸಿದ್ಧಗೊಳಿಸುವಾಗ ಇಟ್ಟುಕೊಳ್ಳಲಾಗಿದೆ.

ಎಲ್ಲ ಹಂತಗಳ ಇಂಗ್ಲಿಷ ಮಾಧ್ಯಮದ ಶಾಲೆಗಳಲ್ಲಿ ಕನ್ನಡ ಕಲಿಸುವ ಶಿಕ್ಷಕರು, ಶಿಕ್ಷಣತಜ್ಞರು ಈ ಪುಸ್ತಕದ ಪಠ್ಯಕಮ್ಮಟದಲ್ಲಿ ನೀಡಿದ ಸೂಚನೆಗಳನ್ನು ಕನ್ನಡ ಸಂಪಾದಕ ಮಂಡಳಿಯು ಪರಿಶೀಲಿಸಿ ಈ ಪಠ್ಯಪುಸ್ತಕಕ್ಕೆ ಅಂತಿಮ ಸ್ವರೂಪ ನೀಡಿದೆ.

ಕನ್ನಡ ಸಂಪಾದಕ ಮಂಡಳಿ ಮತ್ತು ಚಿತ್ರಕಾರರ ಅಭ್ಯಾಸಪೂರ್ವಕ ಪರಿಶ್ರಮದಿಂದ ಈ ಪುಸ್ತಕವು ಸಿದ್ಧವಾಗಿದೆ. ಈ ಪುಸ್ತಕ ತಯಾರಿಸುವಾಗ ಸಹಕರಿಸಿದ ಶಿಕ್ಷಕರು, ಭಾಷಾತಜ್ಞರು, ಸಮೀಕ್ಷಕರು, ಮಾರ್ಗದರ್ಶಕರು ಮೊದಲಾದವರಿಗೆ ಮಂಡಳವು ಮನಃಪೂರ್ವಕವಾಗಿ ಆಭಾರಿಯಾಗಿದೆ.

ವಿದ್ಯಾರ್ಥಿಗಳು, ಶಿಕ್ಷಕರು ಮತ್ತು ಪಾಲಕರು ಈ ಪುಸ್ತಕವನ್ನು ಸ್ವಾಗತಿಸುವರೆಂದು ಆಶಿಸಿದ್ದೇವೆ.


(ಶ್ರೀ. ಸು. ನಾ. ಪವಾರ)
**ಸಂಚಾಲಕ**
ಮಹಾರಾಷ್ಟ್ರ ರಾಜ್ಯ ಪಾಠ್ಯಪುಸ್ತಕ ನಿರ್ಮಿತಿ ಹಾಗೂ
ಅಭ್ಯಾಸಕ್ರಮ ಸಂಶೋಧನ ಮಂಡಳ, ಪುಣೆ-೪೧೧ ೦೦೪.

ಪುಣೆ :
ದಿನಾಂಕ : ೨೧ ಜನೇವರಿ, ೨೦೦೯
ಪೌಷ ಕೃ. ೧೧ ಶಕೆ ೧೯೩೦

## ಪರಿವಿಡಿ


| ಅ.ನಂ. | ಪಾಠಗಳು | ಕವಿ/ಲೇಖಕರು | ಪುಟ |
|---|---|---|---|
| ೧. | ನಾ ಭಾರತ ವಾಸಿಯು (ಕವಿತೆ) | ಸಿ. ಸು. ಸಂಗಮೇಶ | ೧ |
| ೨. | ನೀತಿಯ ಬದುಕು | ಹ. ಮ. ಪೂಜಾರ | ೩ |
| ೩. | ಹಸಿರೇ ಉಸಿರು (ಕವಿತೆ) | ಯಶೋದಾ ಪಾಟೀಲ | ೮ |
| ೪. | ಸರಳೆಯ ಸಾಹಸ | ಸಿದ್ದಲಿಂಗಪ್ಪ ಹದಿಮೂರ | ೧೦ |
| ೫. | ಕುರಿಮರಿ ಬೇಕೆ ಕುರೀಮರಿ (ಕವಿತೆ) | ನೀ. ರೇ. ಹಿರೇಮಠ | ೧೫ |
| ೬. | ಸಂಕಲ್ಪ | ಕಲ್ಯಾಣಮೂರ್ತಿ ರಾಮನಾಥಪುರ | ೧೭ |
| ೭. | ಪಾಠ ಊಟ (ಕವಿತೆ) | ಬಿ. ಬಸವಣ್ಣ | ೨೩ |
| ೮. | ರಕ್ಷಾಬಂಧನ | ....... | ೨೫ |
| ೯. | ಪುಟ್ಟನ ಕನಸು (ಕವಿತೆ) | ರಾಧೇಶ ತೋಳಪಾಡಿ ಎಸ್. | ೨೯ |
| ೧೦. | ಗಾಂಧಿ ಜಯಂತಿ | ....... | ೩೨ |
| ೧೧. | ಕನ್ನಡವೆಂದರೆ (ಕವಿತೆ) | ಎನ್. ಶ್ರೀನಿವಾಸ ಉಡುಪ | ೩೬ |
| ೧೨. | ಸಿದ್ಧನ ಪ್ರತಿಭೆ | ಪಂಡಿತರಾವ ಪಾಟೀಲ | ೩೯ |
| ೧೩. | ಹಗ್ಗದ ಗಾಡಿ (ಕವಿತೆ) | ಮಾಸ್ತಿ ಕೆ. ಆರ್. ಕೃಷ್ಣಪ್ಪ | ೪೪ |
| ೧೪. | ಚಿಂತೆ | ಎಂ. ಜಿ. ಗೋವಿಂದರಾಜು | ೪೭ |
| ೧೫. | ತಾರೆಯ ಲೋಕಕೆ ಸಾಗೋಣ (ಕವಿತೆ) | ಎಂ. ಬಿ. ಲಿಂಗದಳ್ಳಿ | ೫೧ |
| ೧೬. | ಮೀರಾ ಬಹೆನ್ | ........ | ೫೩ |
| ೧೭. | ಪುಣ್ಯ ನಗರ (ಕವಿತೆ) | ಬಿ. ಲಲಿತಾರಾವ್ | ೫೬ |
| ೧೮. | ಎತ್ತಿನ ಹಾಲು | ಕುಂದಾನಿ ಸತ್ಯನ್ | ೫೮ |
| ೧೯. | ಅಂಬಿಗ ನಾ ನಿನ್ನ ನಂಬಿದೆ (ಕವಿತೆ) | ಪುರಂದರದಾಸರು | ೬೩ |
| ೨೦. | ಲಾಲ್‌ಬಾಗ್ | ........ | ೬೬ |

# ೧. ನಾ ಭಾರತ ವಾಸಿಯು



ಅವ್ವ ಕೇಳು ಶಾಲೆಗಿಂದು
ಒಬ್ಬ ಹುಡುಗ ಬಂದನು
ಗೆಳೆಯರವನ ಕೇಳಲಾಗಿ
ಅವನು ಏನು ಅಂದನು ।
ಪ್ರಶ್ನೆ : ಬೌದ್ಧ ಜೈನ, ಶಿಖ್ಖಿ, ಸಾಯಿ
ಹಿಂದು ಮುಸಲ್ಮಾನವ ?
ಉತ್ತರ : ನಾನು ಯಾವ ಜಾತಿಯವನು ।
ಅಲ್ಲ ನಾನು ಮಾನವ ॥
ಯಾರು ನನಗೆ ಹೇಳಲಿಲ್ಲ
ಯಾವುದೆನ್ನ ಜಾತಿಯು
ಅಪ್ಪ-ಅವ್ವ ಕರೆದರೆನ್ನ
ನೀನು ಮನೆಯ ಜ್ಯೋತಿಯು

ಪ್ರ : ಮನೆಯ ಪೂಜೆ ಪಾಠವೇನು,
ಬೈಬಲ್, ಗೀತೆ, ಕುರಾನ ?
ಉ : ಅಜ್ಜ-ಅಜ್ಜಿ ನುಡಿದರೆಲ್ಲ
ಧರ್ಮ-ಜ್ಞಾನ ಸಮಾನ ।
ಪ್ರ : ಯಾವ ಭಾಷೆ, ಯಾವ ರಾಜ್ಯ
ಯಾವ ಊರ ವಾಸಿಯು ?
ಉ : ಕಲಿತ ಮೇಲೆ ಎಲ್ಲಿ ಏನು
ನಾ ಭಾರತ ವಾಸಿಯು

– ಸಿ. ಸು. ಸಂಗಮೇಶ

## ಶಬ್ದಗಳ ಅರ್ಥ

ಜ್ಯೋತಿ - ದೀಪ ; ಬೈಬಲ್ - ಕ್ರೈಸ್ತರ ಧರ್ಮಗ್ರಂಥ ; ಗೀತೆ - ಭಗವದ್ಗೀತೆ ; ಕುರಾನ - ಇಸ್ಲಾಂ ಧರ್ಮದ ಗ್ರಂಥ ; ವಾಸಿ - ವಾಸಿಸುವ ಊರು

## ಅಭ್ಯಾಸ

**ಪ್ರಶ್ನೆ ೧) ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.**

ಅ) ಶಾಲೆಗೆ ಯಾರು ಬಂದರು?

ಆ) ಶಾಲೆಗೆ ಬಂದ ಹುಡುಗ ತಾನು ಯಾವ ಜಾತಿಯವನು ಎಂದು ಹೇಳುತ್ತಾನೆ?

ಇ) ಮನೆಯ ಪೂಜೆ ಪಾಠ ಯಾವುದೆಂದು ಇಲ್ಲಿ ಹೇಳಲಾಗಿದೆ?

ಈ) ಅಜ್ಜ-ಅಜ್ಜಿ ಏನೆಂದು ನುಡಿದರು?

ಉ) ತಾನು ಯಾವಾಗ ಭಾರತವಾಸಿ ಎಂದು ಹುಡುಗ ಹೇಳುವನು?

**ಪ್ರಶ್ನೆ ೨) ಬಿಟ್ಟ ಸ್ಥಳ ತುಂಬಿರಿ.**

ಅ) .......................... ಕೇಳಲಾಗಿ ಅವನು ಏನು ಅಂದನು.

ಆ) ಬೌದ್ಧ , ಜೈನ ...................... ಹಿಂದು ಮುಸಲ್ಮಾನವ.

ಇ) ಯಾರು ನನಗೆ ಹೇಳಲಿಲ್ಲ ಯಾವುದೆನ್ನ ...................... .

ಈ) ಯಾವ ಭಾಷೆ, ಯಾವ ರಾಜ್ಯ, ಯಾವ ಊರ ................. .

**ಪ್ರಶ್ನೆ ೩) ಈ ಕೆಳಗಿನಂತೆ ಬರೆಯಿರಿ.**

ಉದಾ. : ಮನೆ - ಮನೆಯನ್ನು

ಶಾಲೆ - ........................ ಕೆರೆ - ........................

ರಾಶಿ - ........................ ಎಮ್ಮೆ - ........................

ಅಂಗಡಿ - ....................

## ಉಪಕ್ರಮ

ರಾಷ್ಟ್ರೀಯ ಭಾವೈಕ್ಯತೆಯನ್ನು ಬೆಳೆಸುವ ಕಥೆ, ಕವಿತೆ, ಘಟನೆಗಳನ್ನು ಮಕ್ಕಳಿಗೆ ಹೇಳಿರಿ.

ಜಾತಿ ಹೀನನ ಮನೆಯ ಜ್ಯೋತಿ ತಾ ಹೀನವೆ?

**ಜೀವನ ಕೌಶಲ :** ಸಮಾನಾನುಭೂತಿ, ವ್ಯಕ್ತಿ-ವ್ಯಕ್ತಿಗಳಲ್ಲಿಯ ಸಹಸಂಬಂಧ ಈ ಕೌಶಲಗಳ ವಿಕಾಸವಾಗುವುದು.

# ೨. ನೀತಿಯ ಬದುಕು

ಅನೇಕ ವರ್ಷಗಳ ಹಿಂದೆ ಕುಮಸಿ ಎಂಬ ಗ್ರಾಮದಲ್ಲಿ ಈರಪ್ಪನೆಂಬ ರೈತನಿದ್ದನು. ಬಡವನಾದರೂ ನೀತಿವಂತನಾಗಿದ್ದನು. ಮೈಮುರಿದು ದುಡಿದು ತನ್ನ ಇಬ್ಬರು ಮಕ್ಕಳೊಂದಿಗೆ ಸುಖದಿಂದ ಜೀವನ ಸಾಗಿಸಿದ್ದನು. ಅನೀತಿ ಎಂದರೆ ಈರಪ್ಪನಿಗೆ ಆಗಿ ಬರುತ್ತಿರಲಿಲ್ಲ. ಅನೀತಿಯಿಂದ ನಡೆದುಕೊಳ್ಳುವ ವ್ಯಕ್ತಿ ಎಷ್ಟೇ ಶ್ರೀಮಂತನಿರಲಿ, ಎಷ್ಟೇ ದೊಡ್ಡವನಿರಲಿ ಅವರಿಗೆ ನಿಷ್ಠುರವಾಗಿ ಹೇಳಿ ಈರಪ್ಪ ಅವರನ್ನು ದಾರಿಗೆ ತರುತ್ತಿದ್ದನು. ಹೀಗಾಗಿ ಈರಪ್ಪನು ನ್ಯಾಯ ನಿಷ್ಠುರತೆಗೆ ಹೆಸರು ಗಳಿಸಿದ್ದನು.

ಈರಪ್ಪನ ಮಕ್ಕಳಲ್ಲಿ ಹಿರಿಯವನೇ ರುದ್ರಪ್ಪ, ಬಾಲಕ ರುದ್ರನಲ್ಲಿ ಓದು ಮುಂದುವರಿಸಬೇಕೆಂಬ ಆಸೆ ಇತ್ತು. ತಾನು ವಿದ್ಯಾವಂತನಾಗಿ ಮುಂದೆ ತನ್ನ ತಮ್ಮನನ್ನೂ ಓದಿಸಬೇಕೆಂಬ ಬಯಕೆ ರುದ್ರಪ್ಪನದಾಗಿತ್ತು. ಉಚಿತ ಪ್ರಸಾದ ನಿಲಯದಲ್ಲಾದರೂ ಉಂಡು ಮಾಧ್ಯಮಿಕ ಶಿಕ್ಷಣವನ್ನು ಮುಗಿಸಬೇಕೆಂದು ರುದ್ರನು ತಂದೆಯ ಆಶೀರ್ವಾದ ಪಡೆದು ಪಟ್ಟಣಕ್ಕೆ ಪಾದಯಾತ್ರೆ ಕೈಕೊಂಡನು. ಪಟ್ಟಣದಲ್ಲಿ ರುದ್ರನಿಗೆ ಪರಿಚಯದವರು ಯಾರೂ ಇರಲಿಲ್ಲ. ತಾನೇ ನೇರವಾಗಿ ಉಚಿತ ಪ್ರಸಾದ ನಿಲಯದ ಮುಖ್ಯಸ್ಥರನ್ನು ಕಂಡು ವಿನಂತಿಸಿಕೊಂಡು ಪ್ರಸಾದ ನಿಲಯದಲ್ಲಿ ಪ್ರವೇಶ ಪಡೆದು ತನ್ನ ಮಾಧ್ಯಮಿಕ ಶಿಕ್ಷಣವನ್ನು ಮುಂದು ವರಿಸಿದನು.

ಶಾಲೆಗೆ ದೀರ್ಘ ಬಿಡುವು ಬಿಟ್ಟಾಗ ರುದ್ರನು ಊರಿಗೆ ಕಾಲ್ನಡಿಗೆಯಿಂದಲೇ ಬಂದು ಹೋಗುತ್ತಿದ್ದನು. ಬಿಡುವಿನ ದಿನಗಳನ್ನು ಮುಗಿಸಿ ಮರಳಿ ಶಾಲೆಗೆ ಹೋಗುವಾಗ, ತಾಯಿಯು ರುದ್ರನಿಗೆ ಎರಡು ಮೂರು ದಿನಗಳಿಗಾಗುವಷ್ಟು ಬುತ್ತಿಯನ್ನು ಕಟ್ಟಿಕೊಡುತ್ತಿದ್ದಳು. ಊರಿಗೆ ಬಂದು ಹೋಗುವ ಮಾರ್ಗದಲ್ಲಿ ಆಯಾಸ ನಿವಾರಿಸಿಕೊಳ್ಳಲು ಮಾರ್ಗದ ಮಧ್ಯದಲ್ಲಿರುವ ಒಂದು ಗ್ರಾಮದ ಧರ್ಮಶಾಲೆಯಲ್ಲಿ ಒಂದು ರಾತ್ರಿ ತಂಗಿ ಮರುದಿನ ನಸುಕಿನಲ್ಲಿ ಮುಂದೆ ಸಾಗುತ್ತಿದ್ದನು.

ಒಂದು ಸಲ ಹೀಗೆಯೇ ಧರ್ಮಶಾಲೆಯಲ್ಲಿ ರಾತ್ರಿ ತಂಗಿದಾಗ, ಮಧ್ಯರಾತ್ರಿಯ ಸಮಯ, ಕತ್ತಲೆ ಕವಿದಿತ್ತು. ಆಯಾಸಗೊಂಡ ರುದ್ರನಿಗೆ ನಿದ್ರೆ

ಆವರಿಸಿತ್ತು. ಆಗ ಕೆಲವು ಜನ ಕಳ್ಳರು ಬಂದು ಧರ್ಮಶಾಲೆಯಲ್ಲಿ ಸೇರಿಕೊಂಡರು. ಕಳ್ಳರ ನಾಯಕ ತನ್ನಲ್ಲಿರುವ ಮೇಣದ ಬತ್ತಿಯನ್ನು ಹೊತ್ತಿಸಿ ಧರ್ಮಶಾಲೆಯಲ್ಲಿ ಅತ್ತಿತ್ತ ನೋಡಿದನು. ನಿದ್ರಿಸುತ್ತಿದ್ದ ಬಾಲಕನ ಹೊರತಾಗಿ ಅಲ್ಲಿ ಯಾರೂ ಇರಲಿಲ್ಲ.


ಕೈಗೆ ಸಿಕ್ಕವರನ್ನು ಜಡತಿ ಮಾಡುವದು ಕಳ್ಳರ ಸ್ವಭಾವವಲ್ಲವೆ? ಸರಿ, ಒಬ್ಬ ಕಳ್ಳನು ನಿದ್ರಿಸುತ್ತಿದ್ದ ರುದ್ರನ ತಲೆದಿಂಬಾಗಿದ್ದ ಕೈಚೀಲದಲ್ಲಿ ಕೈ ಆಡಿಸತೊಡಗಿದನು. ನಿದ್ರಾಭಂಗವಾದ ರುದ್ರನು ಗಾಬರಿಗೊಂಡು ಎದ್ದು ಕುಳಿತನು. ಮೇಣಬತ್ತಿಯ ಮಿಣುಕು ಬೆಳಕಿನಲ್ಲಿ ಕಳ್ಳರನ್ನು ನೋಡಿ ಭಯಗೊಂಡು ಪಿಳಪಿಳನೆ ಕಣ್ಣುಬಿಡುತ್ತ ಸುಮ್ಮನೇ ಕುಳಿತನು. ರುದ್ರನ ಕೈಚೀಲದಲ್ಲಿ ಕೈ ಆಡಿಸಿದ ಕಳ್ಳನಿಗೆ ಬುತ್ತಿ ಗಂಟು, ಪುಸ್ತಕಗಳ ಹೊರತಾಗಿ ಮತ್ತೇನೂ ಸಿಗಲಿಲ್ಲ. ಕಳ್ಳರಿಗೆ ಹಸಿವೆಯೂ ಆಗಿತ್ತು. ಕೈಗೆ ಸಿಕ್ಕ ಬುತ್ತಿಯನ್ನು ಬಿಚ್ಚಿ ಊಟ ಮಾಡಿ ಮುಗಿಸಿಯೇ ಬಿಟ್ಟರು. ಅಂಜಿ ಕುಳಿತ ರುದ್ರನು ತುಟಿ ಬಿಚ್ಚಲಿಲ್ಲ.

''ಹುಡುಗನ ಬುತ್ತಿಯನ್ನಂತೂ ಪೂರ್ಣ ಮುಗಿಸಿಬಿಟ್ಟೆವು, ಅದಕ್ಕೆ ಪ್ರತಿಯಾಗಿ ನಾವು ದೋಚಿ ತಂದ ಹಣದಿಂದ ಸ್ವಲ್ಪ ಹಣವನ್ನು ಅವನ ಖರ್ಚಿಗಾಗಿ ಕೊಟ್ಟು ಉಳಿದ ಹಣವನ್ನು ಹಂಚಿಕೊಂಡು ಬೇಗ ಹೋಗೋಣ'' ಎಂದು ಕಳ್ಳರ ನಾಯಕ ಹೇಳಿದನು.

ಕಳ್ಳರ ನಾಯಕ ಹೇಳಿದ ಮಾತು ರುದ್ರನ ಕಿವಿಗೆ ಬೀಳುತ್ತಲೇ ರುದ್ರಾವತಾರವನ್ನೇ ತಾಳಿದನು ''ನಾನು ತಂದ ಬುತ್ತಿ, ನನ್ನ ತಂದೆ-ತಾಯಿ ನೀತಿಯಿಂದ ದುಡಿದು, ಗಳಿಸಿ ಕಟ್ಟಿದ ಬುತ್ತಿ. ಅದಕ್ಕೆ ಪ್ರತಿಯಾಗಿ ನಿಮ್ಮಂಥವರಿಂದ ನನಗೆ ಏನೂ ಬೇಕಾಗಿಲ್ಲ. ನೀತಿಯಿಂದ ಬಾಳುವುದೊಂದೇ ನನಗೆ ಗೊತ್ತು. ನೀವು ಅನ್ಯಾಯವಾಗಿ ಯಾರಿಂದಲೋ ದೋಚಿ ತಂದ ಈ ಅನೀತಿಯ ಹಣ ನನಗೆ ಬೇಕಿಲ್ಲ'' ಎಂದು ಗಡುಸಾಗಿಯೇ ಹೇಳಿದ ಬಾಲಕ ರುದ್ರನು.

ಬಾಲಕನ ನಿಷ್ಠುರ ಮಾತಿಗೆ ಕಳ್ಳರ ಅನೈತಿಕ ಬಲ ಕುಗ್ಗಿ ಹೋಯಿತು. ಕಳ್ಳರ ತುಟಿ ಬಿಚ್ಚದಂತಾದವು. ಕೆಲವು ಕ್ಷಣ ಶಾಂತ ಚಿತ್ತರಾದ ಕಳ್ಳರ ಮನದಲ್ಲಿ ಬಾಲಕನ ಮಾತುಗಳು ಪ್ರತಿಧ್ವನಿಸತೊಡಗಿದವು. ಕಳ್ಳರ ಮನದಲ್ಲಿ ಯಾವುದೋ

ಹೊಸ ಬೆಳಕು ಮಿಂಚಿದಂತಾಯಿತು. ಕೂಡಲೆ ಎಲ್ಲ ಕಳ್ಳರೂ ತಾವು ದೋಚಿ ತಂದ ಹಣವನ್ನು ಅಲ್ಲಿಯೇ ಬಿಟ್ಟು ಓಡಿ ಹೋದರು.



ಕಳ್ಳರು ಬಿಟ್ಟು ಹೋದ ಹಣವನ್ನು ರುದ್ರನು ಹೊತ್ತು ತಂದು ತಾನು ಓದುತ್ತಿರುವ ಪಟ್ಟಣದಲ್ಲಿಯ ಪೋಲೀಸ ಠಾಣೆಗೆ ಒಪ್ಪಿಸಿ, ನಡೆದ ಕಥೆಯನ್ನೆಲ್ಲ ವಿವರಿಸಿ ಹೇಳಿದನು. ಎಲ್ಲರೂ ಬಾಲಕ ರುದ್ರನ ಗುಣಗಾನ ಮಾಡಿದರು. ಪೋಲೀಸ ಇಲಾಖೆಯವರು ರುದ್ರನನ್ನು ಆದರ್ಶ ಬಾಲಕನೆಂದು ಸನ್ಮಾನಿಸಿದರು.

ಅತ್ತ ಓಡಿ ಹೋದ ಕಳ್ಳರು, ಕಳವು ಮಾಡುವುದನ್ನು ಬಿಟ್ಟು ಮೈಮುರಿದು ದುಡಿದು ಸುಖವಾಗಿ ನೀತಿಯಿಂದ ಬದುಕತೊಡಗಿದರು.

*- ಹ. ಮ. ಪೂಜಾರ*

**ಶಬ್ದಗಳ ಅರ್ಥ**

ಅನೀತಿ - ಕೆಟ್ಟ ನಡತೆ ; ನಿಷ್ಠುರ - ಕಠಿಣತನ, ಬಿರುನುಡಿ ; ಪ್ರಸಾದ ನಿಲಯ - ಉಚಿತ ರೂಪದಲ್ಲಿ ಊಟ ನೀಡುವ ಮನೆ ; ಧರ್ಮಶಾಲೆ - ಉಚಿತವಾಗಿ ವಾಸಕ್ಕೆ ಇರುವ ಸ್ಥಳ ; ಜಡತಿ - ಶೋಧ, ಹುಡುಕುವುದು ; ದೋಚಿ ತಂದ - ಕದ್ದು ತಂದ ; ಪ್ರತಿಧ್ವನಿ - ಮರುದನಿ, ಮಾರ್ದನಿ

**ವಿಶೇಷ ವಿಚಾರ :**

ರುದ್ರಾವತಾರ - ದಕ್ಷನನ್ನು ಸಂಹಾರ ಮಾಡುವುದಕ್ಕಾಗಿ ಶಿವನು ತಾಳಿದ ಅವತಾರ

**ಅಭ್ಯಾಸ**

**ಪ್ರಶ್ನೆ ೧) ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.**

ಅ) ಈರಪ್ಪ ನ್ಯಾಯ ನಿಷ್ಠುರನೆಂದು ಹೇಗೆ ಹೆಸರು ಗಳಿಸಿದ್ದನು?

ಆ) ರುದ್ರಪ್ಪನು ತನ್ನ ಮಾಧ್ಯಮಿಕ ಶಿಕ್ಷಣವನ್ನು ಹೇಗೆ ಮುಂದುವರೆಸಿದನು?

ಇ) ರಾತ್ರಿ ಧರ್ಮಶಾಲೆಯಲ್ಲಿ ಬಂದ ಕಳ್ಳರು ಏನು ಮಾಡಿದರು?

ಈ) ಕಳ್ಳರ ನಾಯಕನು ಕಳ್ಳರಿಗೆ ಏನು ಹೇಳಿದನು?

ಉ) ರುದ್ರಪ್ಪನು ಕಳ್ಳರಿಗೆ ಏನು ಹೇಳಿದನು?

ಊ) ಪೋಲೀಸರು ರುದ್ರನನ್ನು ಆದರ್ಶ ಬಾಲಕನೆಂದು ಏಕೆ ಸನ್ಮಾನಿಸಿದರು?

**ಪ್ರಶ್ನೆ ೨) ಬಿಟ್ಟ ಸ್ಥಳ ತುಂಬಿರಿ.**

ಅ) ............ ಎಂಬ ಗ್ರಾಮದಲ್ಲಿ ಈರಪ್ಪನೆಂಬ ರೈತನಿದ್ದನು.

ಆ) ಕೈಗೆ ಸಿಕ್ಕವರನ್ನು ............... ಮಾಡುವುದೇ ಕಳ್ಳರ ಸ್ವಭಾವ.

ಇ) ಅಂಜಿ ಕುಳಿತ ರುದ್ರ ತುಟಿ ................................ .

ಈ) ಕಳ್ಳರ ಮನದಲ್ಲಿ ............. ಮಾತುಗಳು ಪ್ರತಿಧ್ವನಿಸತೊಡಗಿದವು.

ಉ) ಕಳ್ಳರು ಮೈಮುರಿದು ದುಡಿದು ಸುಖವಾಗಿ ...............ಯಿಂದ ಬದುಕತೊಡಗಿದರು.

**ಪ್ರಶ್ನೆ ೩) ಹೊಂದಿಸಿ ಬರೆಯಿರಿ.**

| | |
|---|---|
| ಅ) ಈರಪ್ಪ | ೧) ಹಿರಿಯ ಮಗ |
| ಆ) ರುದ್ರಪ್ಪ | ೨) ಅನೀತಿಯ ಹಣ |
| ಇ) ಕಳ್ಳರ ಹಣ | ೩) ಉಚಿತ ವಾಸ |
| ಈ) ಧರ್ಮಶಾಲೆ | ೪) ಬಡರೈತ |

## ಉಪಕ್ರಮ * * * * * * * * * * * * * *


ಅ) ಈ ಪಾಠದಲ್ಲಿ 'ಬಾಲಕ' ಎಂಬ ಶಬ್ದ ಎಷ್ಟು ಸಲ ಬಂದಿದೆ, ಹುಡುಕಿ ಬರೆಯಿರಿ.

ಆ) ಕೆಳಗೆ ಕೊಟ್ಟ ಎತ್ತಿನ ಚಿತ್ರದಲ್ಲಿ ಕಂಡುಬರುವ ಅಕ್ಷರಗಳಿಂದ ಶಬ್ದಗಳನ್ನು ತಯಾರಿಸಿರಿ.




**ಅನ್ಯಾಯದ ಹಣ ಕೋಟಿ ಕೊಟ್ಟರೂ ಬೇಡ**

* ಸಮಸ್ಯೆ ಪರಿಹಾರ, ಭಾವನೆಗಳ ಹೊಯ್ದಾಟದೊಂದಿಗೆ ಹೊಂದಾಣಿಕೆ ಕೌಶಲಗಳು ಬೆಳೆಯುವವು.



# ೩. ಹಸಿರೇ ಉಸಿರು

ಹಸಿರು ಬೆಳೆಸಿ
ಉಸಿರು ಉಳಿಸಿ
ಕಾಡು ಬೆಳೆಸಿ
ನಾಡು ಉಳಿಸಿ
ನೆನಪಿಡು ಪುಟ್ಟಾ ಈ ಮಾತು

ಉರಿಬಿಸಿಲು
ಶಮನವಾಗಲು
ಕಾನನಕೆ ಬಲು
ಶಕ್ತಿ ಮೇಲು
ನೆನಪಿಡು ಪುಟ್ಟಾ ಈ ಮಾತು

ಜಲಮಾಲಿನ್ಯ
ಆರೋಗ್ಯ ಮಲಿನ
ವಾಯು ಮಾಲಿನ್ಯ
ಸರ್ವ ಮಲಿನ
ನೆನಪಿಡು ಪುಟ್ಟಾ ಈ ಮಾತು

ವಾಹನಗಳ ಕರ್ಕಶ
ಕಿವಿಗಳ ನಾಶ
ಕೊಳಚೆಯ ವಾಸ
ಸರ್ವನಾಶ
ನೆನಪಿಡು ಪುಟ್ಟಾ ಈ ಮಾತು

– ಯಶೋದಾ ಪಾಟೀಲ

**ಶಬ್ದಗಳ ಅರ್ಥ**

ಉಸಿರು – ಜೀವ ; ಶಮನವಾಗು – ಶಾಂತವಾಗು ; ಕಾನನ – ಅರಣ್ಯ, ಕಾಡು ; ಮಾಲಿನ್ಯ – ಕೊಳೆ ; ಮಲಿನ – ಕೊಳಚೆ ; ಕರ್ಕಶ – ಕಿವಿಗೆ ಗಡುಚಾದ

## ಅಭ್ಯಾಸ

ಪ್ರಶ್ನೆ ೧) ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.

ಅ) ಹಸಿರು ಬೆಳೆಸಿ ಏನು ಉಳಿಸಬೇಕು?

ಆ) ನಾಡು ಉಳಿಸಲು ಏನು ಬೆಳೆಸಬೇಕು?

ಇ) ಸರ್ವ ಮಲಿನ ಹೇಗೆ ಆಗುತ್ತದೆ?

ಈ) ವಾಹನಗಳ ಕರ್ಕಶದಿಂದ ಏನಾಗುತ್ತದೆ?

ಉ) ಸರ್ವನಾಶ ಯಾವುದರಿಂದ ಆಗುತ್ತದೆ?

ಊ) ಅಜ್ಜಿ ಪುಟ್ಟನಿಗೆ ಏನನ್ನು ಬೆಳೆಸಿ ಏನನ್ನು ಉಳಿಸಲು ಹೇಳುತ್ತಿದ್ದಾಳೆ?

ಪ್ರಶ್ನೆ ೨) ಕೆಳಗಿನ ಪದ್ಯವನ್ನು ಪೂರ್ಣಗೊಳಿಸಿರಿ.

ಉರಿಬಿಸಿಲು

..................................

..................................

..................................

..................... ಈ ಮಾತು.

ಪ್ರಶ್ನೆ ೩) ಈ ಕವಿತೆಯಿಂದ ಒಂದೇ ತರಹದ ಅಕ್ಷರದಿಂದ ಕೊನೆಗೊಳ್ಳುವ ಶಬ್ದಗಳನ್ನು ಬರೆಯಿರಿ.

ಉದಾ. : ಹಸಿರು - ಉಸಿರು

ಪ್ರಶ್ನೆ ೪) ಕೆಳಗಿನ ಶಬ್ದಗಳನ್ನು ಸರಿಪಡಿಸಿ ಬರೆಯಿರಿ.

ರುಸಿಉ, ಪಿನನೆಡು, ಲಜನ್ಯಲಿಮಾ, ಗ್ಯಆರೋ, ರ್ವಶಸನಾ

## ಉಪಕ್ರಮ

ಅ) ನಿಮ್ಮ ಶಾಲೆಯ ಬಳಿ ಮತ್ತು ಮನೆಯ ಪರಿಸರದಲ್ಲಿ ಸಸಿಗಳನ್ನು ನೆಟ್ಟು ಬೆಳೆಸಿರಿ ಮತ್ತು ಉಳಿಸಿರಿ.

ಆ) ಗ್ರಾಮಸ್ವಚ್ಛತಾ ಅಭಿಯಾನದಲ್ಲಿ ತಪ್ಪದೇ ಭಾಗವಹಿಸಿರಿ ಮತ್ತು ಪರ್ಯಾವರಣದ ಬಗ್ಗೆ ಹೆಚ್ಚಿನ ಮಾಹಿತಿಯನ್ನು ಪಡೆದುಕೊಳ್ಳಿರಿ.

ಹಸಿರೇ ಜೀವನದ ಉಸಿರು

ಸಮಸ್ಯೆ ಪರಿಹಾರ ಜೀವನ ಕೌಶಲವು ವಿಕಾಸವಾಗುವುದು.

# ೪. ಸರಳೆಯ ಸಾಹಸ

ಗಡಿ ನಾಡು ಪ್ರದೇಶ. ಆ ಊರು ಎತ್ತರದ ದಿಬ್ಬದ ಮೇಲೆ ಕಂಗೊಳಿಸುತ್ತಿತ್ತು. ಅಲ್ಲಲ್ಲಿ ಹಿರಿದಾದ ಮರಗಳು ಹಸಿರಾಗಿ ಕಾಣುತ್ತಿದ್ದವು. ಹಸಿರು ಗಿಡಗಳ ನಡುವೆ ಅಲ್ಲೊಂದು ಇಲ್ಲೊಂದು ಕೆಂಪು ಹೆಂಚಿನ ಮನೆಗಳು ಸೊಗಸಾಗಿ ಕಾಣುತ್ತಿದ್ದವು. ವಿರಳ ಮನೆಗಳಿಂದ ಕೂಡಿದ ಊರ ಮಧ್ಯದಲ್ಲಿ ವಿಶಾಲವಾದ ಕಾಲುವೆ ಹರಿಯುತ್ತಿತ್ತು. ಹೀಗಾಗಿ ಅರ್ಧ ಊರು ಕಾಲುವೆಯ ಎಡಭಾಗಕ್ಕೂ ಉಳಿದ ಅರ್ಧ ಊರು ಕಾಲುವೆಯ ಬಲಭಾಗಕ್ಕೂ ಹಂಚಿಹೋಗಿತ್ತು. ಕಾಲುವೆಯ ಮೇಲೆ ಆಕಾಶದಲ್ಲಿ ಗಿಳಿ-ಗೊರವಂಕ, ಬೆಳ್ಳಕ್ಕಿ, ಬಾನಾಡಿ ನಾನಾ ಪ್ರಕಾರದ ಪಕ್ಷಿಗಳು ಹಾರಾಡುತ್ತಿದ್ದವು. ವಾತಾವರಣ ಬಹಳ ಹಿತಕರವಾಗಿತ್ತು. ಊರ ಜನರು ದನಕರುಗಳಿಗೆ ನೀರು ಕುಡಿಸಲು, ಬಟ್ಟೆ-ಪಾತ್ರೆಗಳನ್ನು ತೊಳೆಯಲು, ಬೆಳಗಿನ ಸ್ನಾನ ಮಾಡಲು ಈ ಕಾಲುವೆಯನ್ನೇ ಅವಲಂಬಿಸಿದ್ದರು.

ಸುಮಾ ತನ್ನ ಮಗಳು ಸರಳೆಯನ್ನು ಸೀಮೆ ಎಣ್ಣೆ ತರಲು ಅಂಗಡಿಗೆ ಕಳಿಸಿದಳು. ಎಂಟು ವರ್ಷದ ಸರಳೆ ಐದು ಲೀಟರಿನ ಪ್ಲಾಸ್ಟಿಕ್ (ಕ್ಯಾನ) ಡಬ್ಬಿ ತೆಗೆದುಕೊಂಡು ಹೋಗುತ್ತಿದ್ದಳು. ಅವಳು ಊರ ಮಧ್ಯದ ಕಾಲುವೆಯನ್ನು ಸೇತುವೆ ಮೇಲಿನಿಂದ ದಾಟಿ ಆಚೆ ಹೋಗುವಾಗ ಎರಡು ವರ್ಷದ ಮಗು ಪಿಂಕಿ ಕಾಲುವೆಯಲ್ಲಿ ಇಳಿಯುವುದನ್ನು ಕಂಡಳು. ಪಿಂಕಿಯ ತಾಯಿ ಕಾಲುವೆಯ ಒಂದು ದಡದಲ್ಲಿ ಸುಮಾರು ದೂರದಲ್ಲಿ ಬಟ್ಟೆ ತೊಳೆಯುತ್ತಿದ್ದಳು. ಮಗುವನ್ನು ಕಾಲುವೆಯ ಹತ್ತಿರ ದೂರದಲ್ಲಿ ಗೋಣಿ ತಟ್ಟಿನ ಮೇಲೆ ಮಲಗಿಸಿ ತಾನು ಬಟ್ಟೆ ತೊಳೆಯುವುದರಲ್ಲಿ ಮಗ್ನಳಾಗಿದ್ದಳು. ಮಗುವಿನ ಕಡೆಗೆ ಗಮನವೇ ಇರಲಿಲ್ಲ. ಇದನ್ನು ಗಮನಿಸಿದ ಸರಳೆ ಓಡಿ ಹೋಗಿ ಕಾಲುವೆಗೆ ಇಳಿದಳು.

ಮಗುವನ್ನು ನೀರಿನಿಂದ ಹೊರಗೆ ಎಳೆಯಲು ಪ್ರಯತ್ನಿಸಿದಳು. ಮಗುವನ್ನು ನೀರಿನ ಸೆಳೆತ ಒಳಕ್ಕೆ ಎಳೆಯುವುದು, ಸರಳೆ ನೀರಿನಿಂದ ಹೊರಗೆ ಎಳೆಯುವದು ಹೀಗೆ ಮಾಡುತ್ತಿರಲು ಮಗು ನೀರಿನಲ್ಲಿ ಮುಳುಗುವ ಸ್ಥಿತಿಗೆ ಬಂತು. ಸರಳೆ ಯುಕ್ತಿಯಿಂದ ಪಿಂಕಿಯನ್ನು ತನ್ನ ಹೆಗಲಿಗೆ ಏರಿಸಿದಳು. ಆದರೆ ಭಾರ

ತಡೆಯಲಾಗದೆ ತಾನೂ ನೀರಿನಲ್ಲಿ ಮುಳುಗತೊಡಗಿದಳು. ನೀರು ಬಾಯಿಗೆ ಬರತೊಡಗಿತು. ನೀರನ್ನು ಕುಡಿಯುವುದು, ಉಗುಳುವುದು ಮಾಡುತ್ತಿದ್ದಂತೆಯೇ ತನ್ನ ಕೈಯಲ್ಲಿರುವ ಪ್ಲಾಸ್ಟಿಕ್ ಡಬ್ಬಿಯ ನೆನಪು ಬಂತು.

ಈಜು ಬಾರದಿದ್ದರೆ ಕುಂಬಳಕಾಯಿ, ಈಜಿನ ಪೆಂಡಿ, ಖಾಲಿ ಡಬ್ಬಿ, ಗಾಳಿ ತುಂಬಿದ ಟ್ಯೂಬ ಬಳಸಿ ಅದರ ಮೇಲೆ ಬಿದ್ದಾಗ ನೀರಿನಿಂದ ದಾಟಬಹುದೆಂದು ಅಜ್ಜಿ ಹೇಳಿದ ಮಾತು ನೆನಪಾಯಿತು. ತಾನೂ ಡಬ್ಬಿಯ ಮೇಲೆ ಬೋರಲಾಗಿ ಬಿದ್ದಳು. ಮಗು ಬೆನ್ನಿನ ಮೇಲೆ ಒರಗಿತು. ಇಬ್ಬರೂ ನೀರಲ್ಲಿ ತೇಲತೊಡಗಿದರು. ನೀರಿನಲ್ಲಿ ಸೆಳೆತ ಬಹಳ ಇಲ್ಲದಿದ್ದರೂ ಅವರು ತೇಲುತ್ತ ನೀರಿನ ಹರಿವಿನ ಗುಂಟ ಸಾಗಿದ್ದರು. ಕಾಪಾಡಿ, ಕಾಪಾಡಿ ಎಂದು ಸರಳೆ ಕೂಗಿದರೂ ಮಗು ಮಾತ್ರ ಸ್ವಚ್ಛಂದವಾಗಿ ನೀರಿನಲ್ಲಿ ಕೈ ಆಡಿಸುತ್ತಾ ನೀರ ಮೇಲಿನ ಗುಳ್ಳೆಗಳನ್ನು ಬಡಿಯುತ್ತಿತ್ತು.



ಮಧ್ಯದ ಕಾಲುವೆಯಲ್ಲಿ ಹಾವುಗಳು ಈಜುತ್ತಿದ್ದವು. ಮೀನುಗಳು ಸರಳೆಯ ಕಾಲುಗಳನ್ನು ಕಚ್ಚುತ್ತಿದ್ದವು. ಇದಾವುದಕ್ಕೂ ಗಮನ ಕೊಡದೇ ಧೈರ್ಯದಿಂದ ಒಂದು ಕೈಯಿಂದ ಡಬ್ಬಿಯನ್ನು ಇನ್ನೊಂದು ಕೈಯಿಂದ ಮಗುವನ್ನು ಭದ್ರವಾಗಿ ಹಿಡಿದು ಸಾಗುತ್ತಿದ್ದಳು ಸರಳೆ.

ಕಾಲುವೆ ದಂಡೆಯಲ್ಲಿ ಹೆಂಗಸರು ಅಲ್ಲಲ್ಲಿ ಬಟ್ಟೆ ತೊಳೆಯುತ್ತಿದ್ದರು. ನೋಡಿದರೂ ಆಳ ನೀರಿಗಿಳಿಯಲು ಯಾರೂ ಧೈರ್ಯ ಮಾಡಲಿಲ್ಲ, ನೋಡಲು

ಬಲು ಮೋಜು ಎನಿಸಿದರೂ, ಮಕ್ಕಳ ಕಷ್ಟ ಗಂಡಾಂತರ ಕಂಡು ಕೂಗಾಡುತ್ತಿದ್ದರು. ಅಷ್ಟರಲ್ಲಿ ಕಾಲುವೆಯ ಜಾಳಿಗೆ ತಡೆಯೊಂದು ಬಂತು. ಸರಳೆ ಬಲು ಜಾಣೆ. ಡಬ್ಬವನ್ನು ಸರಿಯಾಗಿರುವಂತೆ ಹೊಟ್ಟೆಗೆ ಅದುಮಿ ಒಂದು ಕೈಯಿಂದ ಕಾಲುವೆಯ ತಡೆಗೆ ಹಾಕಿದ ಕಬ್ಬಿಣದ ಸರಳುಗಳನ್ನು ಒಂದೊಂದಾಗಿ ಹಿಡಿದು ಉಪಾಯದಿಂದ ಕಾಲುವೆಯ ದಂಡೆಯನ್ನು ಮುಟ್ಟಿದಳು. ತನಗೆ ಈಜು ಬಾರದಿದ್ದರೂ ತನ್ನ ಹಾಗೂ ಮಗುವಿನ ಜೀವ ಉಳಿಸಿದಳು.

ಸರಳೆಯ ಧೈರ್ಯ ಕಂಡು ಪಿಂಕಿಯ ತಾಯಿಗೆ ಎಲ್ಲಿಲ್ಲದ ಸಂತೋಷವಾಯಿತು. ಊರವರು ಸರಳೆಯ ಸಾಹಸಕ್ಕೆ ಸಾವಿರ ರೂಪಾಯಿ ಕೊಟ್ಟು ಸನ್ಮಾನಿಸಿದರು.

*- ಸಿದ್ಧಲಿಂಗಪ್ಪ ಹದಿಮೂರ*

**ಶಬ್ದಗಳ ಅರ್ಥ**

ಗಡಿ - ಸೀಮೆ ; ಕಂಗೊಳಿಸು - ಶೋಭಿಸು ; ವಿರಳ - ಸುಲಭವಾಗಿ ಸಿಕ್ಕದಿರುವ ; ಬಾನಾಡಿ - ಆಕಾಶದಲ್ಲಿ ಹಾರಾಡುವದು ; ಹಿತಕರ - ಮನಸ್ಸಿಗೆ ಆನಂದ ಕೊಡುವ ; ಮಗ್ನವಾಗು - ನಿರತವಾಗು, ತೊಡಗು ; ಸ್ವಚ್ಛಂದ - ಅಡೆತಡೆ ಇಲ್ಲದ ; ಯುಕ್ತಿ - ಉಪಾಯ, ಚಾತುರ್ಯ, ಕೌಶಲ ; ಗಮನ ಕೊಡು - ಲಕ್ಷ್ಯಕೊಡು ; ಭದ್ರವಾಗಿ - ಗಟ್ಟಿಯಾಗಿ ; ಅದುಮು - ಗಟ್ಟಿಯಾಗಿ ಹಿಡಿದುಕೊಳ್ಳು

**ಅಭ್ಯಾಸ**

**ಪ್ರಶ್ನೆ ೧) ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.**

ಅ) ಕಾಲುವೆ ಎಲ್ಲಿ ಹರಿಯುತ್ತಿತ್ತು?
ಆ) ಆಕಾಶದಲ್ಲಿ ಯಾವ ಯಾವ ಪಕ್ಷಿಗಳು ಹಾರಾಡುತ್ತಿದ್ದವು?
ಇ) ಮಗು ಎಲ್ಲಿ ಇಳಿಯುವುದನ್ನು ಸರಳೆ ಕಂಡಳು?
ಈ) ಸರಳೆ ಮಗುವನ್ನು ರಕ್ಷಿಸುವಾಗ ಯಾರು ಹೇಳಿದ ಮಾತು ನೆನಪಾಯಿತು?
ಉ) ಸರಳೆ ಮಗುವನ್ನು ಹೇಗೆ ರಕ್ಷಿಸಿದಳು ಎಂಬುದನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.

ಪ್ರಶ್ನೆ ೨) ಬಿಟ್ಟ ಸ್ಥಳ ತುಂಬಿರಿ.

ಅ) ಕೆಂಪು ಹೆಂಚಿನ ಮನೆಗಳು ................ ಕಾಣುತ್ತಿದ್ದವು.

ಆ) .................. ವರ್ಷದ ಸರಳೆ ಐದು ಲೀಟರಿನ ಪ್ಲಾಸ್ಟಿಕ್ (ಕ್ಯಾನ) ಡಬ್ಬಿ ತೆಗೆದುಕೊಂಡು ಹೋಗುತ್ತಿದ್ದಳು.

ಇ) .................. ಮೇಲಿನಿಂದ ದಾಟಿ ಆಚೆ ಹೋಗುವಾಗ ಎರಡು ವರ್ಷದ ಮಗು ಪಿಂಕಿ ಕಾಲುವೆಯಲ್ಲಿ ಇಳಿಯುವುದನ್ನು ಕಂಡಳು.

ಈ) ಪಿಂಕಿಯ ತಾಯಿ ಕಾಲುವೆಯ ಒಂದು ದಡದಲ್ಲಿ ಸುಮಾರು ದೂರದಲ್ಲಿ ............... .

ಉ) ಸರಳೆ ..........ಯಿಂದ ಪಿಂಕಿಯನ್ನು ತನ್ನ ಹೆಗಲಿಗೆ ಏರಿಸಿದಳು.

ಪ್ರಶ್ನೆ ೩) ಕೆಳಗಿನ ಶಬ್ದಗಳನ್ನು ಯೋಗ್ಯ ಚೌಕಟ್ಟುಗಳಲ್ಲಿ ವರ್ಗೀಕರಿಸಿ ಬರೆಯಿರಿ.

ಸುಮಾ, ಸರಳೆ, ಪ್ಲಾಸ್ಟಿಕ್, ಬಟ್ಟೆ ಪಾತ್ರೆ, ಸೀಮೆ ಎಣ್ಣೆ , ಡಬ್ಬಿ, ಪಿಂಕಿ, ಗಿಳಿ, ಕೋಗಿಲೆ, ಬೆಳ್ಳಕ್ಕಿ , ದನಕರು , ಎಮ್ಮೆ ಆಡು, ಗೊರವಂಕ, ಜಿಂಕೆ

| ವ್ಯಕ್ತಿಗಳು | ವಸ್ತು | ಪ್ರಾಣಿಗಳು | ಪಕ್ಷಿಗಳು |
|---|---|---|---|
| | | | |

ಪ್ರಶ್ನೆ ೪) ಉದಾಹರಣೆಯಲ್ಲಿ ತೋರಿಸಿದಂತೆ ಕೆಳಗಿನ ಶಬ್ದಗಳನ್ನು ಬರೆಯಿರಿ.

ಉದಾ. ಪ್ರದೇಶ - ಪ್ರದೇಶಗಳು

ಮನೆ - ..........................

ಗಿಡ - ..........................

ಊರು - ..............................

ಪಕ್ಷಿ - ..............................

ಆಟ - ..............................

**ಉಪಕ್ರಮ** ❋ ❋ ❋ ❋ ❋ ❋ ❋ ❋ ❋ ❋ ❋ ❋ ❋ ❋

**ಬಾಲ್ಯದಲ್ಲಿ ಸರಳೆಯಂತೆ ಸಾಹಸ ಮೆರೆದ ಬಾಲಕ-ಬಾಲಕಿಯರ ಕಥೆಗಳನ್ನು ಶಿಕ್ಷಕರಿಂದ ಮತ್ತು ಪಾಲಕರಿಂದ ಕೇಳಿ ತಿಳಿದುಕೊಳ್ಳಿರಿ.**

## ಆತ್ಮವಿಶ್ವಾಸವೇ ಸಾಹಸಕ್ಕೆ ಸಾಧನ

❋ ಸ್ವತ:ದ ಅರಿವು, ಸಮಾನಾನುಭೂತಿ, ನಿರ್ಣಯ ಕ್ಷಮತೆ, ಸಮಸ್ಯೆ ಪರಿಹಾರ, ವ್ಯಕ್ತಿ-ವ್ಯಕ್ತಿಗಳಲ್ಲಿಯ ಸಹಸಂಬಂಧ ಕೌಶಲಗಳು ಮಕ್ಕಳಲ್ಲಿ ವಿಕಾಸವಾಗುವವು.

**ವ್ಯಾಕರಣ :**

**ವಿಶೇಷಣಗಳು**

೧) ಈ ಉದ್ಯಾನವನ ಬಹಳ ಸುಂದರವಾಗಿದೆ.


೨) ರಾಯಗಡ ಕೋಟೆಯು ಅತೀ ಭವ್ಯವಾಗಿದೆ.

೩.) ಸಾರಸಬಾಗ ಉದ್ಯಾನದಲ್ಲಿ ಜನರು ಕಿಕ್ಕಿರಿದು ತುಂಬಿದ್ದಾರೆ.

೪) ನಿಸರ್ಗವು ಬಹಳ ರಮಣೀಯವಾಗಿದೆ.

ಮೇಲಿನ ವಾಕ್ಯಗಳಲ್ಲಿ ಗೆರೆ ಹೊಡೆದ ಶಬ್ದಗಳೆಲ್ಲ ಕ್ರಮವಾಗಿ ಉದ್ಯಾನ, ರಾಯಗಡ ಕೋಟೆ, ಸಾರಸಬಾಗ, ನಿಸರ್ಗ ಈ ದೃಶ್ಯಗಳನ್ನು ವಿಶೇಷವಾಗಿ ವರ್ಣಿಸುತ್ತವೆ. ಹೀಗೆ ನಾಮಪದಗಳು ಮತ್ತು ಕ್ರಿಯಾಪದಗಳ ಗುಣ ವಿಶೇಷಗಳನ್ನು ವರ್ಣನೆ ಮಾಡುವ ಶಬ್ದಗಳಿಗೆ 'ವಿಶೇಷಣ' ಎನ್ನುವರು. ಇವುಗಳಲ್ಲಿ ಪ್ರಮುಖವಾಗಿ ನಾಮವಿಶೇಷಣ ಮತ್ತು ಕ್ರಿಯಾವಿಶೇಷಣಗಳೆಂದು ಎರಡು ಪ್ರಕಾರಗಳಿವೆ.

# ೫. ಕುರಿಮರಿ ಬೇಕೇ ಕುರೀಮರಿ



ಕುರೀಮರಿ ಬೇಕೇ ಕುರೀಮರಿ
ಯಾರೂ ಇಲ್ಲವು ಇದಕೆ ಸರಿ
ಹಾಲನು ಕುಡಿದರೆ ಆಡುವುದು
ಹಸಿದರೆ ಮಾತ್ರ ಅರಚುವುದು
ಸಿಕ್ಕಿದನೆಲ್ಲವ ಮುಕ್ಕುವುದು
ರುಚಿ ನೋಡಿ ಆಚೆಗೆ ಎಸೆಯುವುದು
ಕಂಡುದನೆಲ್ಲವ ಬೇಡುವುದು
ಕೊಡದಿರೆ ನಿಮ್ಮನು ಕಾಡುವುದು
ಗಿಲ್ ಗಿಲ್ ಗೆಜ್ಜೆ ಇಡುತಲಿ ಹೆಜ್ಜೆ
ಕೇಕೆಯ ಹಾಕುತ ಓಡುವುದು
ನಗೆ ನಗೆಯಾಡಿ ಮೋಡಿಯ ಮಾಡಿ
ನಿಮ್ಮಯ ಮನವನು ಗೆಲ್ಲುವುದು
ಮುನಿದರೆ ನಿಮ್ಮನು ಅಪ್ಪುವುದು
ಮುದ್ದನು ಕೊಟ್ಟು ರಮಿಸುವುದು
ಸಗಟಿನ ಪೇಟೆಯ ವರ್ತಕರು
ಸಾವಿರ ವರಹಕೆ ಬೇಡಿಹರು
ಬೇಕೇ ನಿಮಗೂ ಕೂಸು ಪುರಿ
ಸಾವಿರ ವರಹದ ನಮ್ಮ ಸಿರಿ

– ನಿ. ರೇ. ಹಿರೇಮಠ

**ಶಬ್ದಗಳ ಅರ್ಥ**

ಅರಚು – ಚೀರು ; ಮುಕ್ಕು – ಗಬಗಬ ತಿನ್ನು ; ಎಸೆ – ಒಗೆ ; ಕೇಕೆ ಹಾಕು – ಜೋರಾಗಿ ಶಬ್ದ ಮಾಡು ; ಮೋಡಿ – ಜಾದು ; ಮುನಿ – ಸಿಟ್ಟಾಗು ; ರಮಿಸು – ಸಮಾಧಾನ ಪಡಿಸು ; ಸಗಟು – ಪೂರ್ಣ, ಎಲ್ಲ ; ಪೇಟೆ – ಸಂತೆ, ಬಜಾರ ; ವರ್ತಕ – ವ್ಯಾಪಾರಿ

## ಅಭ್ಯಾಸ

ಪ್ರಶ್ನೆ ೧) ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.

ಅ) ಕುರಿಮರಿ ಯಾವಾಗ ಅರಚುವದು?

ಆ) ರುಚಿ ನೋಡಿ ಕುರಿಮರಿ ಏನು ಮಾಡುವದು?

ಇ) ಕುರಿಮರಿ ಯಾವಾಗ ಕಾಡುವುದು?

ಈ) ಕೇಕೆ ಹಾಕುತ ಕುರಿಮರಿ ಹೇಗೆ ಓಡುವದು?

ಉ) ನಮ್ಮ ಮನವನ್ನು ಕುರಿಮರಿ ಹೇಗೆ ಗೆಲ್ಲುವದು?

ಊ) ಯಾವ ವರ್ತಕರು ಕುರಿಮರಿಯನ್ನು ಸಾವಿರ ವರಹಕೆ ಬೇಡಿಹರು?

ಪ್ರಶ್ನೆ ೨) ಹೊಂದಿಸಿ ಬರೆಯಿರಿ.

| 'ಅ' ಗುಂಪು | 'ಬ' ಗುಂಪು |
|---|---|
| ೧) ಹಾಲನು ಕುಡಿದರೆ | ಅ) ಓಡುವುದು |
| ೨) ಕಂಡುದನೆಲ್ಲವ | ಆ) ಅಪ್ಪುವುದು |
| ೩) ಕೇಕೆಯ ಹಾಕುತ | ಇ) ರಮಿಸುವುದು |
| ೪) ಮುನಿದರೆ | ಈ) ಆಡುವುದು |
| ೫) ಮುದ್ದನು ಕೊಟ್ಟು | ಉ) ಬೇಡುವುದು |

ಪ್ರಶ್ನೆ ೩) ಕೆಳಗಿನ ಶಬ್ದಗಳನ್ನು ಬಿಡಿಸಿ ಬರೆಯಿರಿ.

ಸಿಕ್ಕಿದನೆಲ್ಲವ, ಕಂಡುದನೆಲ್ಲವ, ನಗೆಯಾಡಿ, ಕೊಡದಿರೆ

ಪ್ರಶ್ನೆ ೪) ಈ ಕವಿತೆಯನ್ನು ಕಂಠಪಾಠ ಮಾಡಿರಿ.

## ಉಪಕ್ರಮ


ಅ) ಒಂದು ಸಣ್ಣ ಮಗುವನ್ನು ನಿಮ್ಮ ಬೆನ್ನ ಮೇಲೆ ಕುಳ್ಳಿರಿಸಿಕೊಂಡು ನೀವು ಈ ಕವಿತೆಯನ್ನು ನಿಮ್ಮ ಮನೆಯಲ್ಲಿ ಇಲ್ಲವೆ ಶಾಲೆಯಲ್ಲಿ ಸಾಭಿನಯವಾಗಿ ಹಾಡಿರಿ.

ಆ) ಇಂಥ ಬೇರೆ ಬೇರೆ ಹಾಡಿನ ರೂಪದ ಆಟಗಳನ್ನು ನಿಮ್ಮ ಗುರುಗಳಿಂದ ಕೇಳಿ ತಿಳಿಯಿರಿ.

ಮಕ್ಕಳ ಆಟ ಚೆಂದ ಬನದ ನೋಟ ಚೆಂದ

* ಸ್ವತಃದ ಅರಿವು, ವ್ಯಕ್ತಿ-ವ್ಯಕ್ತಿಗಳಲ್ಲಿಯ ಸಹಸಂಬಂಧ ಈ ಕೌಶಲಗಳು ವಿಕಾಸವಾಗುವವು.

# ೬. ಸಂಕಲ್ಪ



ಶಾಲೆಯ ಎಂಟನೆಯ ತರಗತಿ ಆರಂಭವಾದಾಗ, ಕ್ಲಾಸ್ ಟೀಚರ್ ಜತೆಯಲ್ಲಿ ಬೇರೊಬ್ಬ ವ್ಯಕ್ತಿ ಇರುವುದು ತಿಳಿಯಿತು. ಮುಖ್ಯಾಧ್ಯಾಪಕರೂ ಅಲ್ಲಿ ಬಂದಿದ್ದರು.

"ಗುಡ್ ಮಾರ್ನಿಂಗ್ ಸರ್ !" ಎಲ್ಲ ಹುಡುಗರೂ ನಿಂತು ನಮಸ್ಕಾರ ಮಾಡಿದರು.

"ಮಕ್ಕಳಾ, ಇಂದು ನಮ್ಮ ನಡುವೆ ಭಾಸ್ಕರ್ ಭಟ್ನಾಗರ್ ಸಾಹೇಬ್ರು ಬಂದಿದ್ದಾರೆ. ಇವರು ನಿಮ್ಮೊಂದಿಗೆ ಸ್ವಲ್ಪ ಮಾತನಾಡುವವರಿದ್ದಾರೆ" ಎಂದು ಆ ವ್ಯಕ್ತಿಯ ಪರಿಚಯವನ್ನು ಕ್ಲಾಸ್ ಟೀಚರ್ ಮಾಡಿಕೊಟ್ಟರು.

ಭಟ್ನಾಗರ್ ಮರ-ಗಿಡಗಳ ವಿಶೇಷ ತಜ್ಞರಾಗಿದ್ದರು. ನಗರದಲ್ಲಿ ಅವರದೇ ಸ್ವಂತ ಫಾರ್ಮ್‌ಹೌಸ್ ಇತ್ತು. ಅಲ್ಲಿ ಅನೇಕ ರೀತಿಯ ಹಣ್ಣು-ತರಕಾರಿಗಳು ಬೆಳೆದಿದ್ದವು. 'ಮಕ್ಕಳೇ, ಇವತ್ತು ಪೇಟೆಯಲ್ಲಿ ತರಕಾರಿ, ಹಣ್ಣುಗಳ ಅಭಾವ ಎಷ್ಟಿದೆ, ಜತೆಗೆ ಅವುಗಳ ಬೆಲೆ ಆಕಾಶಕ್ಕೆ ಮುಟ್ಟಿರುವುದು ನಿಮಗೆ ಗೊತ್ತೇ ಇದೆ ಎಂದರು.

"ಹೌದು ಸಾರ್ !" ಎಂದು ಮಕ್ಕಳು ಒಟ್ಟಿಗೆ ಸಮ್ಮತಿಸಿದರು. "ತರಕಾರಿ, ಹಣ್ಣುಗಳು ನಿಮ್ಮ ಮನೆಯ ಅಂಗಳದಲ್ಲೇ, ಕುಳಿತಲ್ಲೇ ಸಿಗುವಂತಾಗಲು ನೀವು ಬಯಸುತ್ತೀರೇನು?"

"ಹೌದು ಸಾರ್, ಖಂಡಿತ !" ಭಟ್ನಾಗರ್ ಅಂಕಲ್ ಯಾವುದೋ ಜಾದೂ ತೋರಿಸಿ, ಅದರಿಂದ ಹೀಗೆ ಮಾಡುತ್ತಾರೆಂದು ಮಕ್ಕಳು ತಿಳಿದರು. ಈ ರೀತಿಯ ಯೋಚನೆ ಅವರಿಗೆ ಬಹಳ ಸಂತೋಷವಾಯಿತಲ್ಲದೆ ಗಮನವಿಟ್ಟು ಭಟ್ನಾಗರ್ ಅವರ ಮಾತುಗಳನ್ನು ಕೇಳತೊಡಗಿದರು.

"ಎಷ್ಟು ಜನರ ಮನೆಗಳಲ್ಲಿ ಸ್ವಲ್ಪ ಖಾಲಿ ಜಾಗವಿದೆ ಎಂಬುದನ್ನು ಮೊದಲು ಹೇಳಿ?" ಎಂದು ಕೇಳಿದಾಗ ಅರ್ಧಕ್ಕಿಂತ ಹೆಚ್ಚು ಮಕ್ಕಳು ತಮ್ಮ ಕೈಗಳನ್ನು ಎತ್ತಿದರು.

ಆಗ ಭಟ್ನಾಗರ್ ಅವರು ಮಕ್ಕಳಿಗೆ ಮನೆಯ ಖಾಲಿ ಜಾಗಗಳಲ್ಲಿ ತರಕಾರಿ ಬೆಳೆಯುವ ವಿಧಾನವನ್ನು ತಿಳಿಸಿದರು. ಅಲ್ಲದೆ ಸರಳ ಭಾಷೆಯಲ್ಲಿ ಬರೆದ ಪುಸ್ತಕಗಳನ್ನು ಹಂಚಿದರು. ಜತೆಗೆ ಕೆಲವು ತರಕಾರಿ ಬೀಜಗಳನ್ನು ಹಂಚಿದರು.

"ಸಾರ್, ನಮಗೆ ಅಷ್ಟು ಟೈಂ ಎಲ್ಲಿದೆ? ಹೋಂವರ್ಕ್ ಪೂರ್ಣ ಮಾಡಬೇಕಲ್ಲ!" ಎಂದು ಒಬ್ಬ ಹುಡುಗ ಪ್ರಶ್ನಿಸಿದಾಗ ಉಳಿದವರೆಲ್ಲ ತಲೆಯಾಡಿಸಿ ನಕ್ಕರು.

"ಮಕ್ಕಳಾ, ನಿಮಗೆ ಸಿಗುವಷ್ಟು ಸಮಯ ಬೇರಾರಿಗೂ ಸಿಗುವುದಿಲ್ಲ. ಅಲ್ಲದೆ ಓದೋದ್ ಬಿಟ್ಟು ಇನ್ನೇನ್ ಮಾಡ್ತೀರಿ?" ಎಂದಾಗ ಹುಡುಗರು ಒಬ್ಬರ ಮುಖ ಮತ್ತೊಬ್ಬರು ನೋಡಿಕೊಂಡರು.

"ಯಾರಿಗೆ ಆಸಕ್ತಿ ಇದೆಯೋ ಅವರು ಮುಂದೆ ಬನ್ನಿ. ಭಟ್ನಾಗರ್ ಸಾಹೇಬರು ಅದರ ಬಗ್ಗೆ ತಿಳುವಳಿಕೆ ಕೊಡ್ತಾರೆ" ಎಂದು ಮುಖ್ಯೋಪಾಧ್ಯಾಯರೂ ಸಹ ಹೇಳಿದರು.

ಸಂದೀಪ್ ಒಬ್ಬ ಪ್ರಾಮಾಣಿಕ ಹುಡುಗ. ಸಾಧಾರಣ ಕುಟುಂಬದಿಂದ ಬಂದ ಸಂದೀಪನ ಮನೆಯ ಮುಂದೆ ಸ್ವಲ್ಪ ಖಾಲಿ ಜಾಗವಿತ್ತು. ಆತ ಎದ್ದು ಭಟ್ನಾಗರ್‌ರವರಿಂದ ಕೆಲವು ಮಾಹಿತಿಗಳನ್ನು ಪಡೆದನು. ಉಳಿದವರು ಯಾರು ತಲೆ ಕೆಡಿಸಿಕೊಳ್ಳುತ್ತಾರೆ ಎನ್ನುವಂತೆ ಮೌನವಾಗಿ ಕುಳಿತಿದ್ದರು. ತನ್ನ ಮನೆಯಲ್ಲಿ ತರಕಾರಿ ಬೆಳೆಯಲು ಏರ್ಪಾಡು ಮಾಡಿಕೊಂಡಿದ್ದನು.

"ಇದೆಲ್ಲಾ ಸರಿಯಪ್ಪ. ನೀನು ಯಾವಾಗ ಓದ್ತೀಯಾ?" ಎಂದು ಮಣ್ಣು ಅಗೆದು ಸರಿಪಡಿಸುತ್ತಿದ್ದ ಸಂದೀಪನನ್ನು ಅಪ್ಪ ಕೇಳಿದರು. ಓದುವ ವೇಳೆಯಲ್ಲಿ ಯಾವುದೇ ಕಡಿತ ಮಾಡದೆ ಈ ಕೆಲಸದಲ್ಲಿ ತೊಡಗುವುದಾಗಿ ಆತ ಹೇಳಿದ. ಪ್ರತಿವರ್ಷದಂತೆ ಈ ಸಲವೂ ತಾನು ತರಗತಿಯಲ್ಲಿ ಮೊದಲಿಗನಾಗಿ ಬಂದು ಇದನ್ನು ಸಾಬೀತುಪಡಿಸುವುದಾಗಿ ಭರವಸೆ ನೀಡಿದನು. ಸಂದೀಪನ ಆತ್ಮವಿಶ್ವಾಸ ಮತ್ತು ಶ್ರದ್ಧೆಯನ್ನು ಕಂಡು ತಂದೆಗೆ ತುಂಬಾ ಸಂತೋಷವಾಯಿತು. ಅವನಿಗೆ ಆಶೀರ್ವಾದ ಮಾಡಿದಾಗ ಅವನಲ್ಲಿ ಉತ್ಸಾಹ ಇಮ್ಮಡಿಯಾಯಿತು.

ಕೆಲವು ವಾರಗಳ ನಂತರ ಪರೀಕ್ಷೆ ಬಂತು. ಸಂದೀಪ್ ಬೆಳಿಗ್ಗೆ ಬೇಗ ಎದ್ದು ತನ್ನ ವ್ಯಾಸಂಗದಲ್ಲಿ ಶ್ರದ್ಧೆಯಿಂದ ತೊಡಗುತ್ತಿದ್ದನು. ಅನಂತರ ಗಿಡ-ಬಳ್ಳಿಗಳ ಆರೈಕೆ, ಅವುಗಳಿಗೆ ನೀರು, ಗೊಬ್ಬರ ಹಾಕಿ ಶಾಲೆಗೆ ಹೋಗುತ್ತಿದ್ದ. ಸಂಜೆ ಬಂದಾಗಲೂ ಗಿಡಗಳ ಬಗ್ಗೆ ಸ್ವಲ್ಪ ನಿಗಾವಹಿಸಿ, ಹೋಂವರ್ಕ್ ಮುಗಿಸಿ ಆಟವಾಡಲು ಹೊರಗೆ ಹೋಗುತ್ತಿದ್ದನು. ಪರೀಕ್ಷೆಯೂ ಮುಗಿಯಿತು. ಸಂದೀಪ ಬೆಳೆಸಿದ ಗಿಡಗಳೂ ದೊಡ್ಡವಾದವು.

ಫಲಿತಾಂಶದ ದಿನ ಎಲ್ಲ ಹುಡುಗರೂ ಆತಂಕದಿಂದ ರಿಜಲ್ಟ ನಿರೀಕ್ಷೆಯಲ್ಲಿ ಶಾಲೆಯಲ್ಲಿ ಸೇರಿದ್ದರು. ಕ್ಲಾಸ್‌ಟೀಚರ್ ಬಂದು ಫಲಿತಾಂಶ ಹೇಳಿದರು.

"ಸಂದೀಪ್ ಎಲ್ಲಿ? ಇಡೀ ಕ್ಲಾಸ್‌ಗೇ ಪ್ರಥಮ ಸ್ಥಾನ ಗಳಿಸಿರುವ ಸಂದೀಪ್ ಕಾಣ್ತಾ ಇಲ್ಲವಲ್ಲ, ಆ ಬುದ್ಧಿವಂತ ಎಲ್ಲಿ?" ಎಂದು ಟೀಚರ್ ಹೇಳುತ್ತಿರುವಷ್ಟರಲ್ಲಿಯೇ ಸಂದೀಪ್ ಕಾಣಿಸಿಕೊಂಡನು. ಕೈಯಲ್ಲಿ ಒಂದು ಮಂಕರಿಯೂ ಇತ್ತು.

"ಬಾ ಸಂದೀಪ್ ಬಾ, ನಿನ್ನ ಕೈಯಲ್ಲಿ ಇದೇನಿದು?"

"ಸರ್, ತಡವಾಗಿದ್ದಕ್ಕೆ ಕ್ಷಮೆ ಕೇಳ್ತೇನೆ. ಇದು ಇಡೀ ತರಗತಿಗೆ ಸಾರ್" ಎಂದು ಮಂಕರಿ ಮೇಲೆ ಮುಚ್ಚಿದ್ದ ಪೇಪರ ತೆಗೆದನು.

ಮಂಕರಿ ತುಂಬ ದೊಡ್ಡ ಗಾತ್ರದ ಕೆಂಪು ಟೊಮೆಟೋ ತುಂಬಿತ್ತು. ಯಾರಿಗೂ ಅರ್ಥವಾಗಲಿಲ್ಲ, ಇಷ್ಟರಲ್ಲಿ ಭಟ್ನಾಗರ್ ಸಾಹೇಬರು ಕ್ಲಾಸ್‌ಗೆ ಬಂದರು. ಈ ಟೊಮೆಟೋ ತನ್ನ ಮನೆಯ ಖಾಲಿ ಜಾಗದಲ್ಲಿ ಬೆಳೆದದ್ದು ಎಂದು ಸಂದೀಪ್ ವಿಷಯ ತಿಳಿಸಿದಾಗ ಎಲ್ಲರಿಗೂ ಆಶ್ಚರ್ಯವಾಯಿತು.

"ಹೌದು ಮಕ್ಕಳೇ, ಭಟ್ನಾಗರ್ ಸಾರ್ ಬಂದು ಮೂರು ತಿಂಗಳ ಹಿಂದೆ ನಿಮಗೆಲ್ಲಾ ಮನೆಯಲ್ಲಿ ತರಕಾರಿ ಬೆಳೆಯುವುದನ್ನು ತಿಳಿಸಿಕೊಟ್ಟಿದ್ದರು. ಅದನ್ನು ಸಂದೀಪ ಮಾಡಿ ತೋರಿಸಿದನು. ಅವನು ಮನಸ್ಸಿನಲ್ಲಿ ಸಂಕಲ್ಪ ಮಾಡಿಕೊಂಡಿದ್ದರಿಂದಲೇ ಅದರ ಫಲಿತಾಂಶವನ್ನು ನೀವೂ ಕಾಣುತ್ತಿದ್ದೀರಿ", ಎಂದು ಮುಖ್ಯೋಪಾಧ್ಯಾಯರು ವಿವರಿಸಿದರು.

ಭಟ್ನಾಗರ್ ಸಾಹೇಬರು ಸಂದೀಪನ ಪರಿಶ್ರಮ, ಶ್ರದ್ಧೆ ಮತ್ತು ಉತ್ಸಾಹವನ್ನು ಮನಸಾರೆ ಕೊಂಡಾಡಿದರು. ತರಗತಿಯಲ್ಲಿ ಮೊದಲಿಗನಾಗಿ ಬಂದೂ, ಉಳಿದೆಲ್ಲ ರಚನಾತ್ಮಕ ಕೆಲಸಗಳನ್ನು ಮಾಡಬಹುದು ಎಂಬುದನ್ನು ಸಂದೀಪ್ ಸಾಬೀತು ಮಾಡಿ ತೋರಿಸಿದ್ದನು. 'ನಾವೆಲ್ಲರೂ ಸಂದೀಪ್ ಬೆಳೆಸಿರುವ ಕೈತೋಟಕ್ಕೆ ಭೇಟಿ ಕೊಡೋಣ' ಎಂದು ಘೋಷಿಸಿದರು. ಇದರಿಂದ ಉಳಿದ ಮಕ್ಕಳಲ್ಲಿ ಅತೀವ ಆಸಕ್ತಿ, ಸಂತೋಷ ಉಂಟಾಗಿ ಕೂಗತೊಡಗಿದರು. ಸಂದೀಪ್‌ಗೆ ಜಯಕಾರ ಹಾಕಿದರು. ಅವನಂತೆಯೇ ತಾವು ಮಾಡಿ ತೋರಿಸಬೇಕೆಂದು ಸಂಕಲ್ಪ ಮಾಡಿದರು.

*- ಕಲ್ಯಾಣಮೂರ್ತಿ ರಾಮನಾಥಪುರ*

**ಶಬ್ದಗಳ ಅರ್ಥ**

ಫಾರ್ಮ್‌ಹೌಸ್ - ತೋಟದ ಮನೆ ; ಗಮನ - ಲಕ್ಷ್ಯ ; ಏರ್ಪಾಡು - ವ್ಯವಸ್ಥೆ ; ವ್ಯಾಸಂಗ - ಅಭ್ಯಾಸ ; ಮಂಕರಿ - ಬುಟ್ಟಿ ; ತಜ್ಞ - ವಿಶೇಷ ಪ್ರಾವೀಣ್ಯತೆ ಪಡೆದವನು

**ವಿರುದ್ಧಾರ್ಥಕ ಶಬ್ದಗಳು**

ಸ್ವಲ್ಪ × ಬಹಳ ; ಪೂರ್ಣ × ಅಪೂರ್ಣ ; ಸಂತೋಷ × ಅಸಂತೋಷ

**ಅಭ್ಯಾಸ**

**ಪ್ರಶ್ನೆ ೧) ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.**

ಅ) ಕ್ಲಾಸ್ ಟೀಚರರು ಯಾರ ಪರಿಚಯ ಮಾಡಿಕೊಡುವರು?

ಆ) ಭಟ್ನಾಗರ್ ಅವರು ಮಕ್ಕಳಿಗೆ ಮನೆಯ ಖಾಲಿ ಜಾಗದಲ್ಲಿ ಏನು ಮಾಡಬೇಕು ಎಂದು ತಿಳಿಸಿದರು?

ಇ) ಸಂದೀಪನನ್ನು ಅಪ್ಪ ಏನೆಂದು ಕೇಳಿದನು?

ಈ) ಸಂದೀಪ್ ಗಿಡ-ಬಳ್ಳಿಗಳ ಬಗ್ಗೆ ಹೇಗೆ ನಿಗಾವಹಿಸುತ್ತಿದ್ದನು?

ಉ) ಸಂದೀಪನು ಮನಸ್ಸಿನಲ್ಲಿ ಏನು ಸಂಕಲ್ಪ ಮಾಡಿದ್ದನು?

**ಪ್ರಶ್ನೆ ೨) ಬಿಟ್ಟ ಸ್ಥಳ ತುಂಬಿರಿ.**

ಅ) ಭಟ್ನಾಗರ್ ಸಾಹೇಬರು ............. ತಜ್ಞರಾಗಿದ್ದರು.

ಆ) ............. ಒಬ್ಬ ಪ್ರಾಮಾಣಿಕ ಹುಡುಗ.

ಇ) ಸಂದೀಪನು ಗಿಡ, ಬಳ್ಳಿಗಳಿಗೆ ............. ಹಾಕಿ ಶಾಲೆಗೆ ಹೋಗುತ್ತಿದ್ದನು.

ಈ) ಸರ್, ತಡವಾಗಿದ್ದಕ್ಕೆ ........... ಕೇಳ್ತೀನೆ.

ಉ) ಸಂದೀಪ್‌ನಂತೆ ತಾವು ಮಾಡಿ ತೋರಿಸಬೇಕೆಂದು ................. .

**ಪ್ರಶ್ನೆ ೩) ಹೊಂದಿಸಿ ಬರೆಯಿರಿ.**

| 'ಅ' ಗುಂಪು | 'ಬ' ಗುಂಪು |
|---|---|
| ೧) ಪುಸ್ತಕಗಳನ್ನು | ಅ) ಟೊಮ್ಯಾಟೋ |
| ೨) ಸಂದೀಪ್ ಒಬ್ಬ | ಆ) ಬೆಳೆಯುವುದು |
| ೩.) ಕೆಂಪು | ಇ) ಮಾಡಿದರು |
| ೪) ತರಕಾರಿ | ಈ) ಹಂಚಿದರು |
| ೫) ಸಂಕಲ್ಪ | ಉ) ಪ್ರಾಮಾಣಿಕ ಹುಡುಗ |

**ಉಪಕ್ರಮ** * * * * * * * * * * * * * *

**ನಿಮ್ಮ ಮನೆಯ ಸುತ್ತಮುತ್ತಲಿನ ಪರಿಸರದಲ್ಲಿ ಚಿಕ್ಕ ಕೈತೋಟ ಮಾಡಿ ಕಾಯಿಪಲ್ಲೆ ಹಣ್ಣು-ಹಂಪಲ ಬೆಳೆಸಿರಿ.**

ದುಡಿತವೇ ದುಡ್ಡಿನ ತಾಯಿ

* **ಜೀವನ ಕೌಶಲ :** ಸೃಜನಶೀಲ ವಿಚಾರ, ಚಿಕಿತ್ಸಾತ್ಮಕ ವಿಚಾರ ಕೌಶಲಗಳು ಮಕ್ಕಳಲ್ಲಿ ವಿಕಾಸವಾಗುವವು.

**ವ್ಯಾಕರಣ :**

**ಕ್ರಿಯಾಪದಗಳು**

ಕ್ರಿಯೆಯ ಅರ್ಥವನ್ನು ಹೇಳಿಕೊಡುವ ಪದಗಳೇ ಕ್ರಿಯಾಪದಗಳು. ಕ್ರಿಯಾಪದ ವಾಕ್ಯದಲ್ಲಿಯ ಕರ್ತೃವಿನ ಕಾರ್ಯವನ್ನು ತಿಳಿಸುವದು ಮತ್ತು ಕರ್ತೃವಿನ ಪುರುಷ, ಲಿಂಗ, ವಚನಗಳಿಗೆ ಅನುಸಾರವಾಗಿ ವರ್ತಿಸುವುದು.

ಉದಾಹರಣೆಗೆ -

೧) ನಕ್ಷತ್ರಗಳು ಹೊಳೆಯುತ್ತವೆ.

೨) ಶಂಕರನು ಮರವನ್ನು ಹತ್ತುತ್ತಾನೆ.

೩.) ಅಜ್ಜಿಯು ಊರಿನಿಂದ ಬಂದಿದ್ದಳು.

೪) ನಾವು ನಾಳೆ ಊರಿಗೆ ಹೋಗುತ್ತೇವೆ.

ಮೇಲಿನ ವಾಕ್ಯಗಳ ಕೊನೆಯಲ್ಲಿ ಇರುವ ಕ್ರಿಯಾಪದಗಳು ಆರಂಭದಲ್ಲಿರುವ ನಕ್ಷತ್ರ, ಶಂಕರ, ಅಜ್ಜಿ ನಾವು ಇವರ ಕ್ರಿಯೆಯನ್ನು ಹೇಳುತ್ತವೆ.



# ೭. ಪಾಠ-ಊಟ







ಬನ್ನಿರಿ ಮಕ್ಕಳೆ ಎಲ್ಲರು ಕೂಡಿ
ಶಾಲೆಗೆ ನಾವು ಹೋಗೋಣ
ಅಕ್ಷರ ಕಲಿತು ಜ್ಞಾನವ ಪಡೆದು
ಬುದ್ಧಿವಂತರು ನಾವಾಗೋಣ.

ವಿದ್ಯೆಯ ಕಲಿವ ಸಮಯವು ನಮಗಿದು
ದುಡಿಮೆಯು ಈಗ ಬೇಕಿಲ್ಲ
ಪಾಠದ ಜೊತೆಗೆ ಊಟವು ಉಂಟು
ಹಸಿವಿನ ಚಿಂತೆ ಇನ್ನಿಲ್ಲ.

ಮನಸನು ಇಟ್ಟು ಶ್ರಮವನು ಪಟ್ಟು
ಮಾಡಲೇಬೇಕು ಅಭ್ಯಾಸ
ಖೋ-ಖೋ ಕಬಡ್ಡಿ ಚೆಂಡಿನ ಆಟ
ಅದುವೆ ಒಳ್ಳೆಯ ಹವ್ಯಾಸ.

ಬಿಡುವಿನ ವೇಳೆ ಕಳೆಯದೆ ಸುಮ್ಮನೆ
ಕೈತೋಟವನು ಮಾಡೋಣ
ಶಾಲೆಯ ಅಂದ ಹೆಚ್ಚಿಸಲೆಂದು
ಮರ ಗಿಡ ನೆಟ್ಟು ಬೆಳೆಸೋಣ.

- ಬಿ. ಬಸವಣ್ಣ

**ಶಬ್ದಗಳ ಅರ್ಥ**

ಹವ್ಯಾಸ - ಅಭಿರುಚಿ ; ಬುದ್ಧಿವಂತ - ಜಾಣ ; ಕೈತೋಟ - ಸಣ್ಣ ತೋಟ ; ಶ್ರಮಪಡು - ಕಷ್ಟಪಡು

**ವಿಶೇಷ ವಿಚಾರ**

**ಹಸಿವಿನ ಚಿಂತೆ** - ಸರಕಾರವು ಶಾಲಾ ಅವಧಿಯಲ್ಲಿ ಮಧ್ಯಾಹ್ನದ ಊಟ ಒದಗಿಸುವುದರಿಂದ ಹಸಿವಿನ ಚಿಂತೆ ಇಲ್ಲವೆಂದು ಇಲ್ಲಿ ಹೇಳಲಾಗಿದೆ.

**ಅಭ್ಯಾಸ**

**ಪ್ರಶ್ನೆ ೧) ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.**

ಅ) ಮಕ್ಕಳು ಎಲ್ಲರು ಕೂಡಿ ಶಾಲೆಗೆ ಏಕೆ ಹೋಗೋಣ ಎನ್ನುವರು?

ಆ) ಶಾಲೆಯಲ್ಲಿ ಹಸಿವಿನ ಚಿಂತೆ ಏಕೆ ಇಲ್ಲ?

ಇ) ಹವ್ಯಾಸದ ಆಟಗಳು ಯಾವವು ಎಂದು ಕವಿತೆಯಲ್ಲಿ ಹೇಳಲಾಗಿದೆ?

ಈ) ಬಿಡುವಿನ ವೇಳೆ ಮಕ್ಕಳು ಏನು ಮಾಡೋಣವೆನ್ನುವರು?

ಉ) ಶಾಲೆಯ ಅಂದ ಹೆಚ್ಚಿಸಲು ಏನು ಮಾಡಬೇಕು?

**ಪ್ರಶ್ನೆ ೨) ಬಿಟ್ಟ ಸ್ಥಳ ತುಂಬಿರಿ.**

ಅ) .............. ಕಲಿವ ಸಮಯವು ನಮಗಿದು.

ಆ) ಕಬಡ್ಡಿ ಚೆಂಡಿನ ಆಟ ಆದುವೆ ಒಳ್ಳೆಯ .................. .

ಇ) ಶಾಲೆಯ ಅಂದ ಹೆಚ್ಚಿಸಲೆಂದು .............. ಬೆಳೆಸೋಣ.

**ಪ್ರಶ್ನೆ ೩) ಕೆಳಗಿನ ಶಬ್ದಗಳ ಅನುಲೇಖನ ಮಾಡಿರಿ.**

ಅಕ್ಷರ, ಕೈತೋಟ, ಜ್ಞಾನ, ವಿದ್ಯೆ, ಹವ್ಯಾಸ

**ಉಪಕ್ರಮ**

**ಪಠ್ಯದ ಜೊತೆಗೆ ಪಠ್ಯೇತರ ಚಟುವಟಿಕೆಗಳ ಬಗ್ಗೆ ಆಸಕ್ತಿ ಬೆಳೆಸಿಕೊಳ್ಳಿರಿ.**

ವಿದ್ಯೆಯೇ ಬಾಳಿನ ಬೆಳಕು

* ಮಕ್ಕಳಲ್ಲಿ ಸ್ವತಃದ ಅರಿವು, ಸೃಜನಶೀಲ ವಿಚಾರ ಜೀವನ ಕೌಶಲಗಳು ವಿಕಾಸವಾಗುವವು.

# ೮. ರಕ್ಷಾಬಂಧನ



ನಮ್ಮ ಭಾರತ ದೇಶದಲ್ಲಿ ವರ್ಷದ ಹನ್ನೆರಡೂ ತಿಂಗಳುಗಳಲ್ಲಿ ಯಾವುದಾದರೂ ಒಂದು ಹಬ್ಬ ಬರುತ್ತದೆ. ಶ್ರಾವಣ ಮಾಸದಲ್ಲಿ ಹುಣ್ಣಿಮೆಯ ದಿವಸ ಬರುವ ಹಬ್ಬವೇ ರಕ್ಷಾಬಂಧನ. ಸಹೋದರಿಯರು ಅಣ್ಣ-ತಮ್ಮಂದಿರರಿಗೆ ರಾಖಿಯನ್ನು ಕಟ್ಟಿ ತಮ್ಮ ಬಾಂಧವ್ಯವನ್ನು ವ್ಯಕ್ತಪಡಿಸುತ್ತಾರೆ. ಸಹೋದರರು ರಾಖಿಯನ್ನು ಕಟ್ಟಿಸಿಕೊಂಡು "ನೀವು ನಮ್ಮ ಸಹೋದರಿಯರು. ನಿಮ್ಮ ಪ್ರಾಣ-ಮಾನಗಳನ್ನು ರಕ್ಷಿಸುವ ಭಾರವನ್ನು ನಾವು ಹೊರುವೆವು" ಎಂಬ ಭಾವವನ್ನು ವ್ಯಕ್ತಪಡಿಸುತ್ತಾರೆ.

ಶ್ರಾವಣ ಶುದ್ಧ ಹುಣ್ಣಿಮೆಯ ದಿವಸ ಹೆಣ್ಣು ಮಕ್ಕಳು ಬೆಳಿಗ್ಗೆ ಎದ್ದು ಸ್ನಾನ ಮಾಡಿ ಹೊಸ ಬಟ್ಟೆಗಳನ್ನು ಧರಿಸುತ್ತಾರೆ. ತಮ್ಮ ಸಹೋದರರಿಗೆ ಕರೆದು ಅವರ ಬಲ ಮುಂಗೈಗೆ ರಾಖಿಯನ್ನು ಕಟ್ಟುತ್ತಾರೆ. ರಾಖಿಗಳು ವಿವಿಧ ಬಣ್ಣಗಳಲ್ಲಿ, ವಿವಿಧ ಆಕೃತಿಗಳಲ್ಲಿ ಸುಂದರವಾಗಿರುತ್ತವೆ. ರಾಖಿ ಕಟ್ಟಿದ ನಂತರ ಸಹೋದರಿಯರು ಸಹೋದರರಿಗೆ ಮಿಠಾಯಿಗಳನ್ನು ಕೊಟ್ಟು ಬಾಯಿ ಸಿಹಿ ಮಾಡುತ್ತಾರೆ. ಸಹೋದರರು ತಮ್ಮ ಸಹೋದರಿಯರಿಗೆ ಪ್ರೀತಿಯಿಂದ ಕಾಣಿಕೆಗಳನ್ನು ನೀಡುತ್ತಾರೆ.

ರಕ್ಷಾಬಂಧನದ ಕುರಿತು ಅನೇಕ ಐತಿಹಾಸಿಕ ಘಟನೆಗಳು ಇವೆ. ಕೆಲವು ರಾಜರು ಮೊದಲು ತಮ್ಮ ಶತ್ರು ರಾಜರನ್ನು ಸದೆ ಬಡಿದು, ಅನಂತರ ಆ ಶತ್ರು ರಾಜರ ಹೆಣ್ಣುಮಕ್ಕಳ ಕೈಯಿಂದ ರಾಖಿಯನ್ನು ಕಟ್ಟಿಸಿಕೊಂಡು, ಹಿಂದಿನ ವೈರವನ್ನು ಮರೆತು ಬಿಡುತ್ತಿದ್ದರು ಮತ್ತು ರಾಖಿಯನ್ನು ಕಟ್ಟಿದ ಹೆಣ್ಣುಮಕ್ಕಳನ್ನು ತಮ್ಮ ಸಹೋದರಿಯರೆಂದು ಭಾವಿಸಿ ಅವರ ರಕ್ಷಣೆಗೆ ತಮ್ಮ ಪ್ರಾಣವನ್ನೇ ಮೀಸಲಿಡುತ್ತಿದ್ದರು.

ದೇವತೆಗಳಿಗೂ, ದೈತ್ಯರಿಗೂ ನಡೆದ ಯುದ್ಧದಲ್ಲಿ ಮೊದಲು ದೈತ್ಯರಿಗೆ ಜಯವಾಯಿತು. ನಂತರ ದೈತ್ಯರನ್ನು ಸೋಲಿಸುವ ಉಪಾಯಕ್ಕಾಗಿ ದೇವತೆಗಳು ಚಿಂತಿಸಿದರು. ಆಗ ನಾರದ ಮಹರ್ಷಿಯ ಸಲಹೆಯಂತೆ ಇಂದ್ರನ ಪತ್ನಿ ಶಚಿ ದೇವಿಯು ರಕ್ಷಾಬಂಧನ ವ್ರತ ಮಾಡಿ, ಇಂದ್ರನ ಕೈಗೆ ರಾಖಿ ಕಟ್ಟಿದಳಂತೆ. ಆಮೇಲೆ ನಡೆದ ಯುದ್ಧದಲ್ಲಿ ರಾಖಿಯ ಪ್ರಭಾವದಿಂದ ಯುದ್ಧದಲ್ಲಿ ಇಂದ್ರನು ಗೆದ್ದನಂತೆ. ಈ ಘಟನೆಯು ರಾಖಿಯ ಮಹಿಮೆಯನ್ನು ತೋರಿಸುತ್ತದೆ. ಈ ಘಟನೆಯ ಉಲ್ಲೇಖ ಪುರಾಣಗಳಲ್ಲಿ ಕಂಡುಬಂದಿದೆ.

ಇತ್ತೀಚೆಗೆ ಸಹೋದರಿಯರು ಸಹೋದರರಿಗೆ ಕಟ್ಟುವ ರಾಖಿಯು ಪವಿತ್ರ ಭಾವನೆಯ ಸಂದೇಶ ನೀಡುತ್ತದೆ. ರಕ್ಷಾಬಂಧನವು ನಮ್ಮ ಧರ್ಮವು ನಮಗೆ ನೀಡಿದ ಮಧುರ ಬಾಂಧವ್ಯದ ಸಂಕೇತವಾಗಿದೆ.

**ಶಬ್ದಗಳ ಅರ್ಥ**

ಸದೆ ಬಡಿ - ನಾಶ ಮಾಡು, ಕೊಲ್ಲು ; ದೈತ್ಯ - ರಾಕ್ಷಸ ; ಮೀಸಲಿಡು - ಮುಡಿಪಾಗಿಡು ; ಮಾಸ - ತಿಂಗಳು ; ಸಂಕೇತ - ಗುರುತು

**ಅಭ್ಯಾಸ**

**ಪ್ರಶ್ನೆ ೧) ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.**

ಅ) ರಕ್ಷಾಬಂಧನವು ಯಾವ ಮಾಸದಲ್ಲಿ ಬರುತ್ತದೆ?

ಆ) ಸಹೋದರರು ರಾಖಿಯನ್ನು ಕಟ್ಟಿಸಿಕೊಂಡು ಯಾವ ಭಾವವನ್ನು ವ್ಯಕ್ತಪಡಿಸುತ್ತಾರೆ?

ಇ) ರಾಖಿ ಕಟ್ಟಿದ ನಂತರ ಸಹೋದರಿಯರು ಏನು ಮಾಡುತ್ತಾರೆ?

ಈ) ರಕ್ಷಾಬಂಧನದ ಬಗ್ಗೆ ಇರುವ ಐತಿಹಾಸಿಕ ಘಟನೆಗಳನ್ನು ಕುರಿತು ಬರೆಯಿರಿ.


ಉ) ಇಂದ್ರನಿಗೆ ಯುದ್ಧದಲ್ಲಿ ಹೇಗೆ ಜಯವಾಯಿತು?

**ಪ್ರಶ್ನೆ ೨) ಹೊಂದಿಸಿ ಬರೆಯಿರಿ.**

| **'ಅ' ಗುಂಪು** | **'ಬ' ಗುಂಪು** |
|---|---|
| ಅ) ರಾಖಿ | ೧) ಸಹೋದರಿಯರ ರಕ್ಷಣೆ |
| ಆ) ಸಹೋದರರು | ೨) ಯುದ್ಧ |
| ಇ) ದೇವತೆಗಳು, ದೈತ್ಯ | ೩) ಯುದ್ಧದಲ್ಲಿ ಇಂದ್ರನಿಗೆ ಜಯ |
| ಈ) ರಾಖಿಯ ಪ್ರಭಾವ | ೪) ವಿವಿಧ ಬಣ್ಣ |

**ಉಪಕ್ರಮ** * * * * * * * * * * * * * *

**ಕೆಳಗಿನ ಚಿತ್ರವನ್ನು ನೋಡಿರಿ, ಬಿಟ್ಟ ಹಿಂದೂ ತಿಂಗಳುಗಳನ್ನು ಬರೆಯಿರಿ.**




ರಕ್ಷಾಬಂಧನ ಹಬ್ಬ ಸಹೋದರ ಸಹೋದರಿಯರ ದಿಬ್ಬ

* ಸಮಾನಾನುಭೂತಿ ಮತ್ತು ವ್ಯಕ್ತಿ-ವ್ಯಕ್ತಿಗಳಲ್ಲಿಯ ಸಹಸಂಬಂಧ ಕೌಶಲಗಳು ಬೆಳೆಯುವವು.

## ವ್ಯಾಕರಣ :

### ವಿಭಕ್ತಿಗಳು

ನಾಮವಾಚಕಗಳಿಗೆ ಕೆಲವು ಪ್ರತ್ಯಯಗಳನ್ನು ಹೆಚ್ಚಾಗಿ ಸೇರಿಸಿದಾಗ ಅವುಗಳ ಅರ್ಥವು ಸ್ಪಷ್ಟವಾಗುತ್ತದೆ. ಅರ್ಥಸ್ಪಷ್ಟತೆಗಾಗಿ ನಾಮವಾಚಕಗಳಿಗೆ ಇಂತಹ ಪ್ರತ್ಯಯಗಳನ್ನು ಹಚ್ಚಲೇಬೇಕಾಗುತ್ತದೆ. ಇವುಗಳನ್ನೇ ವಿಭಕ್ತಿ ಪ್ರತ್ಯಯಗಳು ಎನ್ನುತ್ತಾರೆ. ಇವು ವಾಕ್ಯದಲ್ಲಿರುವ ಪದ, ಪದಗಳ ನಡುವಿನ ಸಂಬಂಧವನ್ನು ಸೂಚಿಸುತ್ತವೆ.

೧) ಈರಪ್ಪನು ನ್ಯಾಯನಿಷ್ಠುರತೆಗೆ ಹೆಸರು ಗಳಿಸಿದ್ದನು.

೨) ನಾಯಿಯು ಬೊಗಳುತ್ತದೆ.

ಮೇಲೆ ಗೆರೆ ಹೊಡೆದ ಶಬ್ದಗಳನ್ನು ಓದಿರಿ. ಈ ಶಬ್ದಗಳಿಗೆ 'ಉ' ಎಂಬ ವಿಭಕ್ತಿ ಪ್ರತ್ಯಯ ಸೇರಿದೆ. ಇದುವೇ ಪ್ರಥಮಾ ವಿಭಕ್ತಿ.


೧) ಸರಳೆಯು ಮಗುವನ್ನು ರಕ್ಷಿಸಿದಳು.

೨) ಭಟ್ನಾಗರ್ ಮಕ್ಕಳಿಗೆ ಪುಸ್ತಕಗಳನ್ನು ಹಂಚಿದರು.

ಮೇಲೆ ಗೆರೆ ಹೊಡೆದ ಶಬ್ದಗಳನ್ನು ಓದಿರಿ. ಈ ಶಬ್ದಗಳಿಗೆ 'ಅನ್ನು' ಎಂಬ ವಿಭಕ್ತಿ ಪ್ರತ್ಯಯ ಸೇರಿದೆ. ಇದುವೇ ದ್ವಿತೀಯಾ ವಿಭಕ್ತಿ.



# ೯. ಪುಟ್ಟನ ಕನಸು



ಪುಟ್ಟ : ಆಕಾಶಪ್ಪ ಆಕಾಶಪ್ಪ
ಏರಿದ್ಯಾಕೋ ಅಷ್ಟೆತ್ರ ?
ಏನೋ ಗುಟ್ಟು ಹೇಳೋಕುಂಟು
ಬರ್ಲಾ ನಾನು ನಿನ್ ಹತ್ರ ?

ಆಕಾಶಪ್ಪ : ಹಕ್ಕಿ ಅಲ್ಲ, ರೆಕ್ಕೆ ಇಲ್ಲ
ಹ್ಯಾಗೋ ಬರ್ತೀ ನನ್ ತಾವ?
ನನ್ನೀ ಅರಮನೆ ದ್ವಾರಗಳನ್ನ
ಗಿಡುಗ, ಹದ್ದು ಕಾಯ್ತಾವ !

ಪುಟ್ಟ : ಖಾಲಿ ಮಾಮ, ಪೋಲಿ ಮಾಮ
ಯಾಕೋ ಹಾಗೆ ಹೇಳ್ತೀಯ ?
ಹತ್ರ ಕರ್ದ್ರೆ ಗುಡುಗಿದ್ರೆ
ಗಿಡುಗ ಕೂಡ ನಡುಗೋಲ್ವ?

ಆಕಾಶಪ್ಪ : ಗಿಡುಗನ ಮಾತು ಹಾಗಿರ್ಲಿ,
ಹುಡುಗ, ಹ್ಯಾಗೋ ಬರ್ತೀಯ ?
ನೆಲದಲಿ ಹೂತ ಕಾಲನ್ನ
ಹ್ಯಾಗೆ ತಾನೇ ಕೀಳ್ತೀಯ ?

ಪುಟ್ಟ : ನನ್ನ ಪೆದ್ದ ಅಂದ್ಕೊಂಡ್ಯಾ?
ಪ್ಲೇನನ್ನೇರಿ ಬರ್ತೀನಿ !
ರಾಕೆಟ್‌ನಲ್ಲಿ ಕೂತ್ಕೊಂಡು
ನಿಮ್ಮನೆ ಮೇಲೇ ಹಾರ್ತೀನಿ !

ಆಕಾಶಪ್ಪ : ಏನೇ ಪ್ಲ್ಯಾನು ಮಾಡಿದ್ರೂ
ಇಲ್ಲೀ ತನಕ ತಲುಪೋಲ್ಲ !
ತಿಪ್ಪರಲಾಗ ಹಾಕಿದ್ರೂ
ಅರಮನೆ ಬಾಗಿಲು ತೆರೆಯೋಲ್ಲ !

ಪುಟ್ಟ : ನೀಲಿ ಮಾಮ, ಮೇಲಿನ್ ಮಾಮ
ಬರ್ಲೇಬೇಕು ನಿನ್ನೂರ್ಗೆ !
ಸಾವಿರ ಮಾತು ಹೇಳೋಕ್ ಇತ್ತು
ಕರ್ಕೊ ನನ್ನ ನಿನ್ ಬಳಿಗೆ !

*- ರಾಧೇಶ ತೋಳಪಾಡಿ ಎಸ್.*

**ಶಬ್ದಗಳ ಅರ್ಥ**

ತಾವ - ಹತ್ತಿರ, ಸಮೀಪ ; ಪೋಲಿ - ತುಂಟ ; ಗುಟ್ಟು - ರಹಸ್ಯ ; ದ್ವಾರ - ಬಾಗಿಲು ; ಗುಡುಗು - ಅಬ್ಬರಿಸು ; ಹೂತ - ಹೂಳು

**ವಿಶೇಷ ವಿಚಾರ**

**ತಿಪ್ಪರಲಾಗ ಹಾಕು** - ತಲೆ ಕೆಳಗೆ ಕಾಲು ಮೇಲೆ ಮಾಡಿ ಲಾಗ ಹಾಕುವದು, ಅಂದರೆ ಅದು ಕಷ್ಟದ ಕೆಲಸ ಎಂದರ್ಥ

**ರಾಕೆಟ್** - ಆಕಾಶಬಾಣ, ರಾಕೆಟ್ಟು

**ಪ್ಲ್ಯಾನು** - ಯೋಜನೆ, ಉಪಾಯ ಮಾಡು, ಸಿದ್ಧತೆ ಮಾಡಿಕೊಳ್ಳು

**ಅಭ್ಯಾಸ**

**ಪ್ರಶ್ನೆ ೧) ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರ ಬರೆಯಿರಿ.**

ಅ) ಪುಟ್ಟ ಆಕಾಶಪ್ಪನ ಹತ್ತಿರ ಏನು ಹೇಳುವವನಿದ್ದಾನೆ?
ಆ) ಆಕಾಶಪ್ಪನ ಅರಮನೆ ದ್ವಾರಗಳನ್ನು ಯಾರು ಕಾಯುತ್ತಾರೆ?

ಇ) ಪುಟ್ಟ ಆಕಾಶಪ್ಪನ ಕಡೆಗೆ ಹೇಗೆ ಬರ್ತೇನೆಂದು ಹೇಳುತ್ತಾನೆ?

ಈ) ಏನನ್ನು ಹಿಡಿದು ಪುಟ್ಟ ನೇತಾಡುತ್ತೇನೆಂದು ಹೇಳುತ್ತಾನೆ?

ಪ್ರಶ್ನೆ ೨) ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.

ಅ) ಪುಟ್ಟನಿಗೆ ತನ್ನ ಹತ್ತಿರ ಬರುವದು ಸಾಧ್ಯವಿಲ್ಲ ಎಂದು ಆಕಾಶಪ್ಪ ಏಕೆ ಹೇಳುತ್ತಾನೆ?

ಆ) ಪುಟ್ಟ ಆಕಾಶಪ್ಪನ ಕಡೆಗೆ ಏನನ್ನೇರಿ ಬರುವವನಿದ್ದಾನೆ?

ಇ) ಪುಟ್ಟನಿಗೆ ನೀಲಿಮಾಮನ ಕಡೆಗೆ ಏಕೆ ಹೋಗಬೇಕಾಗಿದೆ?

ಪ್ರಶ್ನೆ ೩) ಕೆಳಗಿನ ಸಾಲುಗಳ ಅರ್ಥ ವಿಸ್ತರಿಸಿ ಬರೆಯಿರಿ.

ಅ) ಏನೇ ಪ್ಲ್ಯಾನು ಮಾಡಿದ್ರು
ಇಲ್ಲೀ ತನಕ ತಲುಪೋಲ್ಲ

ಆ) ಸಾವಿರ ಮಾತು ಹೇಳೋಕ್ ಇತ್ತು
ಕರ್ಕೊ ನನ್ನ ನಿನ್ ಬಳಿಗೆ !

ಪ್ರಶ್ನೆ ೪) ಈ ಕವಿತೆಯಲ್ಲಿ ಬಂದಿರುವ ಗ್ರಾಮ್ಯ ಶಬ್ದಗಳನ್ನು ಗ್ರಾಂಥಿಕ ರೂಪದಲ್ಲಿ ಬರೆಯಿರಿ.

ಉಪಕ್ರಮ

ಅ) ಆಕಾಶಪ್ಪನ ಹತ್ತಿರ ಹೋಗಲು ಸಾಧ್ಯವಿದೆಯೇ ಎಂಬುದರ ಬಗ್ಗೆ ಶಿಕ್ಷಕರ ಸಹಾಯದಿಂದ ತಿಳಿದುಕೊಳ್ಳಿರಿ.

ಆ) ಖಾಲಿಮಾಮ - ಇದೇ ರೀತಿ ಈ ಪದ್ಯದಲ್ಲಿ ಬಂದಿರುವ ಶಬ್ದಗಳನ್ನು ಬರೆಯಿರಿ.

ಇ) ಈ ಕವಿತೆಯಲ್ಲಿ ಬಂದಿರುವ ಪುಟ್ಟನಂತೆ ನೀವೂ ಸಹ ಚಂದಮಾಮನ ಜೊತೆ ಸಂಭಾಷಣೆ ಮಾಡಿದಂತೆ ಹತ್ತು ಸಾಲು ಬರೆಯಿರಿ.

ಬಳ್ಳಿಗೆ ಹೂವು ಚೆಂದ, ಆಕಾಶಕ್ಕೆ ತಾರೆ ಚೆಂದ

ಪರಿಣಾಮಕಾರಕ ಸಂಪರ್ಕ ಮತ್ತು ಸೃಜನಶೀಲ ವಿಚಾರ ಕೌಶಲಗಳು ಬೆಳೆಯುವವು.

# ೧೦. ಗಾಂಧಿ ಜಯಂತಿ

ಜಯಶ್ರೀ ಪಾಟೀಲ
'ಶಾರದಾ ನಿಲಯ',
ಮ. ನಂ. ೩.೦೪,
ಸಯಾನಿ ರೋಡ,
ಪ್ರಭಾದೇವಿ, ಮುಂಬಯಿ-೨೫
ದಿನಾಂಕ : ೨೦.೧೦.೨೦೦೮

ಪ್ರೀತಿಯ ಸಹೋದರ ವಿನೋದನಿಗೆ ಶುಭಾಶೀರ್ವಾದಗಳು.

ನಾನು ಇಲ್ಲಿ ನನ್ನ ಗೆಳತಿಯರೊಂದಿಗೆ ಕ್ಷೇಮವಾಗಿದ್ದೇನೆ. ಅಲ್ಲಿ ನೀನು ಅಪ್ಪ ಅಮ್ಮ ಎಲ್ಲರೂ ಕ್ಷೇಮವೆಂದು ತಿಳಿಯುವೆ. ನಿನ್ನ ಅಭ್ಯಾಸ ಹೇಗೆ ನಡೆದಿದೆ ಮತ್ತು ನಿಮ್ಮೆಲ್ಲರ ಕ್ಷೇಮವನ್ನು ಕುರಿತು ಈ ಪತ್ರ ಮುಟ್ಟಿದ ಕೂಡಲೆ ಉತ್ತರ ಬರೆ.

ಇತ್ತೀಚೆಗೆ ನಮ್ಮ ಶಾಲೆಯಲ್ಲಿ ಆಚರಿಸಿದ ಮಹಾತ್ಮಾ ಗಾಂಧಿ ಜಯಂತಿಯ ಕುರಿತು ತಿಳಿಸಲು ನನಗೆ ಆನಂದವೆನಿಸುತ್ತದೆ.

ಮೊನ್ನೆ ಅಕ್ಟೋಬರ ೨ ರಂದು ನಮ್ಮ ಶಾಲೆಯಲ್ಲಿ ಗಾಂಧಿ ಜಯಂತಿ ಆಚರಿಸಿದೆವು. ನಮಗೆ ಸ್ವಾತಂತ್ರ್ಯ ದೊರಕಿಸಿಕೊಡುವಲ್ಲಿ ಪ್ರಮುಖ ಪಾತ್ರ ವಹಿಸಿದ ಹಾಗೂ ಮುಂಚೂಣಿಯ ನಾಯಕರಾಗಿದ್ದ ಗಾಂಧೀಜಿಯವರ ಜಯಂತಿಯನ್ನು ನಾವು ಶಿಕ್ಷಕರೊಂದಿಗೆ ಸಂಭ್ರಮ, ಸಡಗರದಿಂದ ಆಚರಿಸಿದೆವು. ಸತ್ಯ, ಅಹಿಂಸೆ, ಶಾಂತಿ ಮುಂತಾದ ಮಾನವೀಯ ಮೌಲ್ಯಗಳನ್ನು ಅಸ್ತ್ರಗಳನ್ನಾಗಿಸಿಕೊಂಡು ಬ್ರಿಟಿಷರ ಮನವನ್ನು ಗೆದ್ದು ಗಾಂಧೀಜಿಯವರು ನಮಗೆ ಸ್ವಾತಂತ್ರ್ಯವನ್ನು ದೊರಕಿಸಿಕೊಟ್ಟದ್ದು ನಮ್ಮೆಲ್ಲರ ಮನದಲ್ಲಿ ಅಚ್ಚಳಿಯದೆ ಉಳಿದಿದೆ.

ಅಂದು ನಮ್ಮ ಶಾಲೆಯಲ್ಲಿ ಎಲ್ಲರೂ ಸೇರಿ ಗಾಂಧಿ ಜಯಂತಿ ಆಚರಿಸಲು ಮುಂದಾದೆವು. ಆಕಾಶನು ತಮ್ಮ ತೋಟದಲ್ಲಿ ಬೆಳೆದಿದ್ದ ಹೂವುಗಳಿಂದ ಮಾಲೆಯನ್ನು ಮಾಡಿಕೊಂಡು ಬಂದಿದ್ದನು. ದಾಕ್ಷಾಯಣಿಯು ತೆಂಗು,

ಕುಂಕುಮ, ಊದುಬತ್ತಿ ಮುಂತಾದವುಗಳನ್ನೆಲ್ಲ ತಂದಿದ್ದಳು. ನಾನು ನನ್ನ ಗೆಳತಿಯರ ಜೊತೆಗೆ ನಮ್ಮ ಶಿಕ್ಷಕರಿಗೆ ಸಹಾಯ ಮಾಡಿದೆನು.

ಮುಂಜಾನೆ ೧೦ ಗಂಟೆಗೆ ನಾವೆಲ್ಲ ಸಭಾಗೃಹದಲ್ಲಿ ಒಟ್ಟಿಗೆ ಸೇರಿದೆವು. ವೇದಿಕೆಯಲ್ಲಿ ಗಾಂಧೀಜಿಯವರ ಭಾವಚಿತ್ರ ಇಡಲಾಗಿತ್ತು. ನಮ್ಮ ಮುಖ್ಯೋಪಾಧ್ಯಾಯರು ಭಾವಚಿತ್ರಕ್ಕೆ ಪೂಜೆ ಮಾಡಿ ಮಾಲಾರ್ಪಣೆ ಮಾಡಿದರು. ವಿಮಲಾ ಟೀಚರ ಮತ್ತು ರಾಜೇಶ ಸರ್ ಗಾಂಧೀಜಿಯವರ ಸ್ವಾತಂತ್ರ್ಯ ಚಳುವಳಿಯ ಇತಿಹಾಸವನ್ನು ಕುರಿತು ಬಣ್ಣಿಸಿ ಹೇಳಿದರು.



ವಿದ್ಯಾರ್ಥಿಗಳಲ್ಲಿ ನಾನು ಮತ್ತು ನನ್ನ ಸಹಪಾಠಿ ಮಹೇಶ ಮಾತನಾಡಿದೆವು. ಗಾಂಧೀಜಿಯವರ ಆದರ್ಶಗಳನ್ನು ನಾವೆಲ್ಲರೂ ನಮ್ಮ ಜೀವನದಲ್ಲಿ ಅಳವಡಿಸಿಕೊಳ್ಳೋಣ ಎಂದೆವು. ನಮ್ಮ ಮಾತುಗಳನ್ನು ಕೇಳಿ ಗುರುಗಳೆಲ್ಲ ಮೆಚ್ಚುಗೆ ವ್ಯಕ್ತಪಡಿಸಿದರು. ರಾಣಿ ತಮ್ಮ ತಂದೆ ಬರೆದಿದ್ದ ಗಾಂಧೀಜಿಯವರ ಕುರಿತ ಕವಿತೆಯನ್ನು ಸುಶ್ರಾವ್ಯವಾಗಿ ಹಾಡಿದಳು.

ಇದೇ ರೀತಿ ನಿಮ್ಮ ಶಾಲೆಯಲ್ಲಿ ಗಾಂಧಿ ಜಯಂತಿ ಆಚರಿಸಿರಬೇಕಲ್ಲವೆ? ಅದನ್ನು ನಾನು ದೀಪಾವಳಿ ರಜೆಗೆ ಊರಿಗೆ ಬಂದಾಗ ವಿವರವಾಗಿ ಹೇಳುವಿಯಂತೆ. ಮನೆಯಲ್ಲಿ ಅಪ್ಪ ಅಮ್ಮನಿಗೆ, ಅಜ್ಜ-ಅಜ್ಜಿಗೂ ನನ್ನ ನಮಸ್ಕಾರಗಳನ್ನು ತಿಳಿಸು.

ಇಂತಿ ನಿನ್ನ ಪ್ರೀತಿಯ ಸಹೋದರಿ,
ಜಯಶ್ರೀ ಪಾಟೀಲ

ಗೆ -

ವಿನೋದ ಪಾಟೀಲ
'ಧನಲಕ್ಷ್ಮಿ ನಿವಾಸ',
ಮ. ನಂ. ೨೦೩,
ನೀಲಮ ನಗರ, ಸೋಲಾಪುರ



**ಶಬ್ದಗಳ ಅರ್ಥ**

ಮುಂಚೂಣಿ - ಮುಂಭಾಗ ; ನಾಯಕ - ಮುಖಂಡ ; ಜಯಂತಿ - ಜನ್ಮದಿನಾಚರಣೆ ; ಅಚ್ಚಳಿಯದೆ - ಮರೆಯಲಾರದೆ ; ಅಳವಡಿಸಿಕೊಳ್ಳು - ಹೊಂದಿಸಿಕೊಳ್ಳು

**ಅಭ್ಯಾಸ**

ಪ್ರಶ್ನೆ ೧) **ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.**

ಅ) ಜಯಶ್ರೀ ಯಾರಿಗೆ ಪತ್ರ ಬರೆದಳು?

ಆ) ಅಕ್ಟೋಬರ ೨ ರಂದು ಯಾರ ಜಯಂತಿ ಆಚರಿಸಲಾಗುತ್ತದೆ?

ಇ) ಆಕಾಶನು ತಮ್ಮ ತೋಟದಿಂದ ಏನನ್ನು ತಂದನು?

ಈ) ಗಾಂಧೀಜಿಯವರ ಬಗ್ಗೆ ಯಾರು ಯಾರು ಮಾತನಾಡಿದರು?

ಉ) ಜಯಶ್ರೀ ಯಾವ ರಜೆಯಲ್ಲಿ ಊರಿಗೆ ಬರುವೆನೆಂದು ಸಹೋದರನಿಗೆ ಪತ್ರದಲ್ಲಿ ತಿಳಿಸಿದಳು?

ಪ್ರಶ್ನೆ ೨) ಬಿಟ್ಟ ಸ್ಥಳ ತುಂಬಿರಿ.

ಅ) ಮಹಾತ್ಮಾ ಗಾಂಧಿ ............ ಕುರಿತು ತಿಳಿಸಲು ನನಗೆ ಆನಂದವೆನಿಸುತ್ತದೆ.

ಆ) ನಮಗೆ ಸ್ವಾತಂತ್ರ್ಯ ದೊರಕಿಸಿಕೊಟ್ಟದ್ದು ನಮ್ಮೆಲ್ಲರ ಮನದಲ್ಲಿ ............ ಉಳಿದಿದೆ.

ಇ) ............ ನಾವೆಲ್ಲ ಸಭಾಗೃಹದಲ್ಲಿ ಒಟ್ಟಿಗೆ ಸೇರಿದೆವು.

ಈ) ನಮ್ಮ ಮಾತುಗಳನ್ನು ಕೇಳಿ ಗುರುಗಳೆಲ್ಲ ............ .

ಉ) ರಾಣಿ ತಮ್ಮ ತಂದೆ ಬರೆದಿದ್ದ ಗಾಂಧೀಜಿಯವರ ಕುರಿತ ............ ಸುಶ್ರಾವ್ಯವಾಗಿ ಹಾಡಿದಳು.

ಪ್ರಶ್ನೆ ೩) ಉದಾಹರಣೆಯಲ್ಲಿ ತೋರಿಸಿದಂತೆ ಶಬ್ದಗಳನ್ನು ಪೂರ್ಣಗೊಳಿಸಿರಿ.

ಉದಾ. : ಅಪ್ಪ - ಅಮ್ಮ

ಅಜ್ಜ - ............

ದೊಡ್ಡಪ್ಪ - ............

ದೊಡ್ಡಮ್ಮ - ............

ಚಿಕ್ಕಪ್ಪ - ............

ಉಪಕ್ರಮ

ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಿದ ನಾಯಕರ ಚಿತ್ರಗಳನ್ನು ಸಂಗ್ರಹಿಸಿರಿ.

## ಪತ್ರ ಸಕಲರ ಮಿತ್ರ

ಪರಿಣಾಮಕಾರಕ ಸಂಪರ್ಕ, ವ್ಯಕ್ತಿ - ವ್ಯಕ್ತಿಗಳಲ್ಲಿಯ ಸಹಸಂಬಂಧ ಮುಂತಾದ ಕೌಶಲಗಳು ವಿಕಾಸವಾಗುವವು.

# ೧೧. ಕನ್ನಡವೆಂದರೆ



ಕನ್ನಡವೆಂದರೆ ಏನಪ್ಪಾ ಮರಿ?
ಅಪ್ಪಿ ಮುದ್ದಿಸುವ ತಾಯಿ !
ಇನ್ನೂ ಬೇಕು, ಬೇಕು–ಎನ್ನಿಸುವ
ಸವಿ ಸವಿ ಕೊಬ್ಬರಿ ಮಿಠಾಯಿ !

ಕನ್ನಡವೆಂದರೆ ಏನಪ್ಪಾ ಮರಿ?
ರಸಪುರಿ ಮಾವಿನ ಹಣ್ಣು !
ಎಳೆಯಬಿಸಿಲಿನಲಿ ಥಳಥಳ ಹೊಳೆಯುವ
ನವಿಲುಗರಿಯ ಕಣ್ಣು !

ಕನ್ನಡವೆಂದರೆ ಏನಪ್ಪಾ ಮರಿ?
ಜಾಜಿ ಮಲ್ಲಿಗೆಯ ಕಂಪು !
ಪುಟ್ಟಕೃಷ್ಣನ ತುಟಿಯಲಿ ಹೊಮ್ಮಿದ
ಕೊಳಲಿನ ನಾದದ ಇಂಪು !

ಕನ್ನಡವೆಂದರೆ ಸುಂದರ ಕನಸಲಿ
ಕುಣಿಕುಣಿದಾಡುವ ಮನಸು !
ಕೃಷ್ಣೆ, ತುಂಗೆ, ಭದ್ರೆ, ಕಾವೇರಿಯರಾಡುವ
ಶ್ಯಾಮಲ ಲಾಸ್ಯದ ನೆಲಸು !



– ಎನ್. ಶ್ರೀನಿವಾಸ ಉಡುಪ

## ಶಬ್ದಗಳ ಅರ್ಥ

ಮಿಠಾಯಿ - ಸಿಹಿತಿಂಡಿ ; ರಸಪುರಿ - ರಸ ತುಂಬಿರುವ ; ಕಂಪು - ಸುವಾಸನೆ ; ಹೊಮ್ಮಿದ - ಹೊರಬಿದ್ದ ; ಇಂಪು - ಸುಮಧುರವಾದ, ಎಳೆ ಬಿಸಿಲು - ಹೂ ಬಿಸಿಲು ; ನೆಲೆಸು - ವಾಸಿಸು ; ಲಾಸ್ಯ - ಲಲಿತವಾದ ನರ್ತನ, ಕುಣಿತ

## ಅಭ್ಯಾಸ

ಪ್ರಶ್ನೆ ೧) ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.

ಅ) ಎಳೆಯ ಬಿಸಿಲಿನಲ್ಲಿ ನವಿಲಗರಿಯ ಕಣ್ಣು ಹೇಗೆ ಹೊಳೆಯುವುದು?

ಆ) ಪುಟ್ಟ ಕೃಷ್ಣನ ತುಟಿಯಲ್ಲಿಯ ಕೊಳಲಿನ ನಾದ ಹೇಗಿದೆ?

ಇ) ಮನಸು ಎಂಥ ಕನಸಿನಲ್ಲಿ ಕುಣಿದಾಡುವುದು?

ಈ) ಈ ಕವಿತೆಯಲ್ಲಿ ಬಂದಿರುವ ನದಿಗಳ ಹೆಸರುಗಳನ್ನು ಬರೆಯಿರಿ.

ಪ್ರಶ್ನೆ ೨) ಕೆಳಗಿನ ಪದ್ಯವನ್ನು ಪೂರ್ಣಗೊಳಿಸಿರಿ.

ಕನ್ನಡವೆಂದರೆ ಸುಂದರ ..............................

..............................

..............................

.............................. ನೆಲಸು !

ಪ್ರಶ್ನೆ ೩) ಕೆಳಗಿನವುಗಳಿಗೆ ಒಂದೊಂದು ಸಮಾನಾರ್ಥಕ ಶಬ್ದ ಬರೆಯಿರಿ.

ತಾಯಿ, ಮಿಠಾಯಿ, ಕಣ್ಣು ಪುಟ್ಟ ಕನಸು


ಪ್ರಶ್ನೆ ೪) ಕೆಳಗಿನವುಗಳಿಗೆ ವಿರುದ್ಧಾರ್ಥಕ ಶಬ್ದ ಬರೆಯಿರಿ.

ಬೇಕು × ಕನಸು × ಬಿಸಿಲು ×

## ಉಪಕ್ರಮ

ಅ) ನಾಡಗೀತೆ ಹಾಗೂ ದೇಶಭಕ್ತಿ ಗೀತೆಗಳ ಬಗ್ಗೆ ಇರುವ ಧ್ವನಿಸುರುಳಿಗಳ್ನು ಕೇಳಿ ಆನಂದಿಸಿರಿ.

ಆ) ಕೆಳಗೆ ಕೊಟ್ಟ ನವಿಲುಗರಿಯಿಂದ ಅಕ್ಷರಗಳನ್ನು ಆಯ್ದು ಹತ್ತು ಶಬ್ದಗಳನ್ನು ತಯಾರಿಸಿರಿ.




ಕನ್ನಡಕೆ ಹೋರಾಡು ಕನ್ನಡದ ಕಂದ

# ೧೨. ಸಿದ್ಧನ ಪ್ರತಿಭೆ



ಸಿದ್ಧನಿಗೆ ಇಂದು ಎಲ್ಲಿಲ್ಲದ ಸಡಗರ. ಬೇಗನೆ ಎದ್ದು ಹಲ್ಲುಜ್ಜಿ , ಸ್ನಾನ ಮಾಡಿ, ಶುಭ್ರ ಬಟ್ಟೆ ತೊಟ್ಟು , ಊಟದ ಡಬ್ಬಿಯಲ್ಲಿ ಚಕ್ಕುಲಿ, ಚೂಡಾ, ಪೇಢೆ ತುಂಬಿಕೊಂಡು ಹರ್ಷದಿಂದ ಶಾಲೆಗೆ ಹೋಗಲು ತಯಾರಾದನು. ತಲೆ ಮೇಲೆ ಹ್ಯಾಟು, ಕಾಲಲ್ಲಿ ಬೂಟು ತೊಟ್ಟು ಠೀವಿಯಲ್ಲಿ ಹೊರಟನು. ಅವನ ಹರ್ಷಕ್ಕೆ ಕಾರಣ ಇಲ್ಲದಿಲ್ಲ. ಇಂದು ಶಾಲೆಯಲ್ಲಿ ಗುರುಗಳು ಮಕ್ಕಳೆಲ್ಲರನ್ನು ವನವಿಹಾರಕ್ಕೆ ಕರೆದೊಯ್ಯುತ್ತಿದ್ದಾರೆ.

ಮಕ್ಕಳು ಬಸ್ಸಿನಲ್ಲಿ ಕುಳಿತಾಗ ಅವರ ಸಂತೋಷಕ್ಕೆ ಪಾರವೇ ಇರಲಿಲ್ಲ. ಬಸ್ಸು ಊರು ದಾಟಿ ಕಚ್ಚಾ ರಸ್ತೆಯಲ್ಲಿ ಜೋಲಿ ಹೊಡೆಯುತ್ತ ಡಾಂಬರ ರಸ್ತೆಗೆ ಕಾಲಿಟ್ಟಿತು. ಮಕ್ಕಳು ಕಿಟಕಿಯ ಮೂಲಕ ಸೃಷ್ಟಿ ಸೌಂದರ್ಯವನ್ನು ಸವಿದರು. ಹಸಿರು ಗದ್ದೆ, ಜುಳುಜುಳು ಹರಿಯುವ ನದಿ, ನೀಲಾಕಾಶದಲಿ ತೇಲುವ ಮೋಡ, ಚಿಲಿಪಿಲಿಗುಟ್ಟುವ ಹಕ್ಕಿಗಳು ... ಮುಕ್ಕಾಲು ಗಂಟೆ ಸಾಗಿದ ನಂತರ ಬಸ್ಸು ಬೆಟ್ಟವನ್ನು ಸುತ್ತಿ, ಬಳಸಿ ತುತ್ತ ತುದಿಗೇರಿತು.

ಮಕ್ಕಳೆಲ್ಲ ಕೆಳಗಿಳಿದಾಗ, ಪ್ರಕೃತಿಯ ಸಿರಿ ಅವರನ್ನು ಮಂತ್ರಮುಗ್ಧರನ್ನಾಗಿಸಿತು. ಬೆಟ್ಟದ ಮೇಲೆ ಪುರಾತನ ಒಂದು ದೊಡ್ಡ ದೇವಸ್ಥಾನವಿತ್ತು. ಕಲ್ಲಿನಲ್ಲಿ ಸೂಕ್ಷ್ಮವಾಗಿ ಕೆತ್ತಿದ ಶಿಲ್ಪ ; ಆಕಾಶದೆತ್ತರಕ್ಕೆ ನಿಂತ ಗೋಪುರ. ಮಕ್ಕಳು ಗುರುಗಳೊಂದಿಗೆ ದೇವರ ದರ್ಶನ ಪಡೆದು ವಿಶಾಲ ಹುಲ್ಲುಹಾಸಿನಲ್ಲಿ ವೃತ್ತಾಕಾರವಾಗಿ ಕುಳಿತರು.

ನಿಮ್ಮ-ನಿಮ್ಮ ಇಷ್ಟದಂತೆ ಹಾಡು, ಕುಣಿತ, ಮೂಕಾಭಿನಯ, ಏಕಪಾತ್ರಾಭಿನಯ ಏನೆಲ್ಲ ಮಾಡಬಹುದು. ಆದರೆ ಸಿನಿಮಾ ಹಾಡುಗಳಿಗೆ ಅವಕಾಶವಿಲ್ಲ ಎಂದರು ಗುರುಗಳು. ಮೊದಲು ಗೋಪಾಲ ಸುಶ್ರಾವ್ಯವಾಗಿ ಹಾಡು ಹೇಳಿದರೆ, ಶಿಲ್ಪಾ ನೃತ್ಯ ಮಾಡಿದಳು, ರಫೀಕ ಕತೆ ಹೇಳಿದನು, ಈಗ ಸಿದ್ಧನ ಸರದಿ. ಅಭ್ಯಾಸದಲ್ಲಿ ಹಿಂದೆ ಬಿದ್ದಿದ್ದ ಸಿದ್ಧನು ಹಾಡು-ಕಥೆ ಹೇಳುವುದರಲ್ಲಿ ಎತ್ತಿದ ಕೈ !

"ಕನ್ನಡ ನಾಡಿದು ; ಪ್ರಕೃತಿಯ ಬೀಡಿದು ಕೃಷ್ಣಾ ಕಾವೇರಿ ಹರಿದಿಹ ನೆಲವಿದು" ಎಂದು ಸುಶ್ರಾವ್ಯವಾಗಿ ಹಾಡುತ್ತ, ತಾಳಕ್ಕೆ ತಕ್ಕಂತೆ ನೃತ್ಯವನ್ನೂ ಮಾಡಿದನು. ವಿದ್ಯಾರ್ಥಿಗಳೆಲ್ಲ ಅವನ ಕೋಗಿಲೆ ಕಂಠ ಕೇಳಿ ದಿಙ್ಮೂಢರಾದರು. ಪಾಠ ಸರಿಯಾಗಿ ಓದದೆ, ಸರಿಯಾದ ಸಮಯಕ್ಕೆ ಶಾಲೆಗೆ ಬರದೆ ... ಹೀಗೆ ಒಂದಲ್ಲ ಒಂದು ಕಾರಣದಿಂದ ದಿನಾಲೂ ಶಿಕ್ಷಕರು ಅವನನ್ನು ಕಡೆಗಣಿಸುತ್ತಿದ್ದರು. ಆದರೆ ಇಂದು ಎಲ್ಲರಿಂದ ಮೆಚ್ಚುಗೆ ಪಡೆದು ಚಪ್ಪಾಳೆ ಗಿಟ್ಟಿಸಿದನು.

ಕೊನೆಗೆ ಶಿಕ್ಷಕರು ಮಕ್ಕಳಿಗೆ ಉಪದೇಶ ಹೇಳತೊಡಗಿದರು. "ದೇವರು ಎಲ್ಲರಿಗೂ ಒಂದೊಂದು ವಿದ್ಯೆ ಕೊಟ್ಟಿರುತ್ತಾನೆ. ಮಗು ಜಾಣನಾಗಬೇಕಾದರೆ ಬರೀ ಪಠ್ಯದಿಂದಲ್ಲ, ಪಠ್ಯೇತರ ಚಟುವಟಿಕೆಗಳಿಂದಲೂ ಜಾಣನಾಗಬಹುದು. ಆಟ, ಓಟ, ಚಿತ್ರಕಲೆ, ಸಂಗೀತ, ನೃತ್ಯದಂಥ ಚಟುವಟಿಕೆಗಳಿಂದ ಪ್ರಸಿದ್ಧಿಯನ್ನು ಗಳಿಸಬಹುದು. ಉದಾಹರಣೆಗೆ, ರವಿವರ್ಮ ರಾಜನಾಗಿದ್ದರೂ ಚಿತ್ರಕಲೆಯಲ್ಲಿ ಮಹಾನ್ ಕಲಾವಿದನಾಗಿರಲಿಲ್ಲವೆ? ಜಕಣಾಚಾರಿ ಕಲ್ಲಿನಲ್ಲಿ ಜೀವ ತುಂಬಿ ಪ್ರಸಿದ್ಧ ಶಿಲ್ಪಿಯಾಗಲಿಲ್ಲವೇ? ಅದರಂತೆ ಇಂದು ಸಿದ್ಧನು ತನ್ನ ಮಧುರ ಕಂಠದಿಂದ ನಮ್ಮನ್ನೆಲ್ಲ ರಂಜಿಸಿದ್ದಾನೆ. ಈವರೆಗೆ ಅಭ್ಯಾಸವೊಂದನ್ನೇ ಗಣನೆಗೆ ತೆಗೆದುಕೊಂಡು ಅವನನ್ನು ತುಚ್ಛವಾಗಿ ಕಂಡಿದ್ದೆವು. ಅವರವರ ಆಸಕ್ತಿಗೆ ತಕ್ಕಂಥ

ಶಿಕ್ಷಕರು, ಪೋಷಕರು ಪ್ರೋತ್ಸಾಹ ಕೊಟ್ಟರೆ ಮಕ್ಕಳು ಏನೆಲ್ಲಾ ಸಾಧಿಸಬಲ್ಲರು ಎಂಬುದಕ್ಕೆ ಇಂದಿನ ಸನ್ನಿವೇಶವೇ ಉದಾಹರಣೆ ..." ಮಕ್ಕಳೆಲ್ಲಾ ಗುರುಗಳ ಮಾತಿಗೆ ಹರ್ಷದಿಂದ ಚಪ್ಪಾಳೆ ತಟ್ಟಿದರು.

ಸಿದ್ಧನು ಮನೆಗೆ ತಲುಪಿದೊಡನೆ ಶಿಕ್ಷಕರು ಕೊಟ್ಟ ಬಹುಮಾನವನ್ನು ಅಮ್ಮನಿಗೆ ತೋರಿಸಿದನು. ಅಮ್ಮ ಒಂದು ಕ್ಷಣ ದಿಗಿಲುಗೊಂಡು, "ನಿನ್ನಂಥವನಿಗೆ ಅದಾವ ಬಹುಮಾನ ಕೊಟ್ಟರು?" ಎಂದು ಆಶ್ಚರ್ಯ ವ್ಯಕ್ತಪಡಿಸಿದಳು. ಸಿದ್ಧನು ನಡೆದ ಸಂಗತಿಯನ್ನು ವಿವರಿಸಿದಾಗ, ಬರೀ ಪ್ರಶ್ನೆ - ಉತ್ತರಗಳನ್ನು ಕಂಠಪಾಠ ಮಾಡಿಸಿ ಚಿತ್ರಕಲೆ, ಸಂಗೀತಗಳನ್ನು ಕಡೆಗಣಿಸುತ್ತಿದ್ದ ಅಮ್ಮನಿಗೆ ಈಗ ತನ್ನ ತಪ್ಪಿನ ಅರಿವಾಯಿತು.

*- ಪಂಡಿತರಾವ ಪಾಟೀಲ*

**ಶಬ್ದಗಳ ಅರ್ಥ**

ಹಲ್ಲುಜ್ಜು - ಹಲ್ಲು ತಿಕ್ಕು ; ಹ್ಯಾಟು - ಟೊಪ್ಪಿಗೆ ; ವನವಿಹಾರ - ವನಭೋಜನ ; ಚಿಲಿಪಿಲಿಗುಟ್ಟು - ಸದ್ದು ಮಾಡು ; ಮಂತ್ರಮುಗ್ಧ - ದಂಗು ಬಡೆ ; ಪುರಾತನ ಕಾಲ - ಹಿಂದಿನ ಕಾಲ ; ಶಿಲ್ಪ - ಮೂರ್ತಿ ; ಗೋಪುರ - ಗುಡಿಯ ಶಿಖರ ; ಸುಶ್ರಾವ್ಯ - ಸುಂದರವಾಗಿ, ಚೆನ್ನಾಗಿ ; ದಿಙ್ಮೂಢ - ಆಶ್ಚರ್ಯ ; ಗಿಟ್ಟಿಸು - ಪಡೆ ; ರಂಜಿಸು - ಆನಂದಿಸು ; ಗಣನೆ - ಲಕ್ಷ್ಯ ; ತುಚ್ಚ - ಕೀಳು ; ಪೋಷಣೆ - ಪಾಲನೆ ಮಾಡು ; ಪ್ರೋತ್ಸಾಹ - ಹುರಿದುಂಬಿಸು ; ಅರಿವು - ತಿಳುವಳಿಕೆ

**ವಿರುದ್ಧಾರ್ಥಕ ಶಬ್ದಗಳು**

ಕೆಳಗೆ × ಮೇಲೆ ; ಇಂದು × ನಾಳೆ ; ಆಸಕ್ತಿ × ನಿರಾಸಕ್ತಿ ; ತಪ್ಪು × ಸರಿ

**ಸಮಾನಾರ್ಥಕ ಶಬ್ದಗಳು**

ಹರ್ಷ - ಆನಂದ, ಸಂತೋಷ ; ಆಕಾಶ - ಬಾನು, ಗಗನ, ಆಗಸ, ನಭ ; ಗೋಪುರ - ಶಿಖರ ; ಬೆಟ್ಟ - ಗುಡ್ಡ

## ಅಭ್ಯಾಸ

**ಪ್ರಶ್ನೆ ೧) ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.**

ಅ) ಗುರುಗಳು ಮಕ್ಕಳನ್ನು ಎಲ್ಲಿಗೆ ಕರೆದುಕೊಂಡು ಹೋದರು?

ಆ) ಮಕ್ಕಳು ಕಿಟಕಿಯ ಮೂಲಕ ಏನನ್ನು ಸವಿಯುತ್ತಿದ್ದರು?

ಇ) ಬೆಟ್ಟದ ಮೇಲೆ ಏನು ಇತ್ತು?

ಈ) ಅಭ್ಯಾಸದಲ್ಲಿ ಹಿಂದೆ ಇದ್ದ ಸಿದ್ದನದು ಯಾವುದರಲ್ಲಿ ಎತ್ತಿದ ಕೈ?

**ಪ್ರಶ್ನೆ ೨) ಬಿಟ್ಟ ಸ್ಥಳ ತುಂಬಿರಿ.**

ಅ) ಮಕ್ಕಳೆಲ್ಲ ಕೆಳಗಿಳಿದಾಗ, ಪ್ರಕೃತಿಯ ಸಿರಿ ಅವರನ್ನು .........ರನ್ನಾಗಿಸಿತು.

ಆ) .................. ಹಾಡುಗಳಿಗೆ ಅವಕಾಶವಿಲ್ಲ.

ಇ) ವಿದ್ಯಾರ್ಥಿಗಳೆಲ್ಲ ಅವನ ಕೋಗಿಲ ಕಂಠ ಕೇಳಿ ..................

ಈ) ಸಿದ್ಧನು ಇಂದು ಎಲ್ಲರಿಂದ ಮೆಚ್ಚುಗೆ ಪಡೆದು ........... ಗಿಟ್ಟಿಸಿದನು.

ಉ) ............ ಒಂದನ್ನೇ ಗಣನೆಗೆ ತೆಗೆದುಕೊಂಡು ಅವನನ್ನು ತುಚ್ಛವಾಗಿ ಕಂಡಿದ್ದೆವು.

**ಪ್ರಶ್ನೆ ೩) ಕೆಳಗಿನ ಮಾತುಗಳನ್ನು ಯಾರು ಯಾರಿಗೆ ಹೇಳಿದರು?**

ಅ) ದೇವರು ಎಲ್ಲರಿಗೂ ಒಂದೊಂದು ವಿದ್ಯೆ ಕೊಟ್ಟಿರುತ್ತಾನೆ.

ಆ) ನಿನ್ನಂಥವನಿಗೆ ಆದಾವ ಬಹುಮಾನ ಕೊಟ್ಟರು?

ಇ) ಜಕಣಾಚಾರಿ ಕಲ್ಲಿನಲ್ಲಿ ಜೀವ ತುಂಬಿ ಪ್ರಸಿದ್ಧ ಶಿಲ್ಪಿಯಾಗಲಿಲ್ಲವೆ?

**ಪ್ರಶ್ನೆ ೪) ಕೆಳಗಿನ ಶಬ್ದಗಳನ್ನು ವಾಕ್ಯದಲ್ಲಿ ಬಳಸಿರಿ.**

ಮಂತ್ರಮುಗ್ಧರನ್ನಾಗಿಸು, ದಿಙ್ಮೂಢರಾಗು, ರಂಜಿಸು, ಸುಶ್ರಾವ್ಯ

ಪ್ರಶ್ನೆ ೫) ಶಬ್ದಗಳನ್ನು ಸರಿಪಡಿಸಿ ಬರೆಯಿರಿ.

ವಹಾವಿನರ .......................... ಪ್ರತಿಕ್ರ ....................

ಉಶದೇಪ .......................... ಕೆಚವಟಿಟು ..........................

ಜಣಾರಿಚಾಕ ..........................

ಉಪಕ್ರಮ * * * * * * * * * * * * * *

ವನಭೋಜನದಂಥ ಕಾರ್ಯಕ್ರಮ ಆಯೋಜಿಸಿ ಮಕ್ಕಳ ಪ್ರತಿಭೆಯನ್ನು ಪ್ರಕಟಗೊಳಿಸಲು ಪ್ರೋತ್ಸಾಹಿಸಿರಿ.

ಪ್ರತಿಭೆ ಎಲ್ಲರಲ್ಲೂ ಇರುತ್ತದೆ

* ಸೃಜನಶೀಲ ವಿಚಾರ, ಪರಿಣಾಮಕಾರಕ ಸಂಪರ್ಕ ಮತ್ತು ವ್ಯಕ್ತಿ-ವ್ಯಕ್ತಿಗಳಲ್ಲಿಯ ಸಹಸಂಬಂಧ ಮುಂತಾದ ಕೌಶಲಗಳು ಬೆಳೆಯುವವು.

ವ್ಯಾಕರಣ :

೧) ನಾವು ಅನೀತಿಯಿಂದ ಬದುಕಬಾರದು.

೨) ಸಂತೋಷನು ಬೆಂಗಳೂರಿನಿಂದ ಬೆಳಿಗ್ಗೆ ಬಂದನು.

ಮೇಲೆ ಗೆರೆ ಹೊಡೆದ ಶಬ್ದಗಳನ್ನು ಓದಿರಿ. ಈ ಶಬ್ದಗಳಿಗೆ 'ಇಂದ' ಎಂಬ ವಿಭಕ್ತಿ ಪ್ರತ್ಯಯ ಸೇರಿದೆ. ಇದುವೇ ತೃತೀಯಾ ವಿಭಕ್ತಿ.

೧) ನ್ಯಾಯದಿಂದ ಬದುಕಲು ಪ್ರತಿಯೊಬ್ಬರಿಗೆ ಹಕ್ಕು ಇದೆ.

೨) ಮಕ್ಕಳಿಗೆ ಆಟ ಆಡುವುದೆಂದರೆ ಬಲು ಇಷ್ಟ

ಮೇಲೆ ಗೆರೆ ಹೊಡೆದ ಈ ಶಬ್ದಗಳನ್ನು ಓದಿರಿ. ಅವುಗಳಿಗೆ 'ಇಗೆ' ಎಂಬ ವಿಭಕ್ತಿ ಪ್ರತ್ಯಯ ಸೇರಿದೆ. ಇದುವೇ ಚತುರ್ಥಿ ವಿಭಕ್ತಿ.

# ೧೩. ಹಗ್ಗದ ಗಾಡಿ



ಹಗ್ಗದ ಗಾಡಿಯು
ನುಗ್ಗುತ ಬಂದಿತು
ಆಟದ ಬಯಲಿಗೆ ಓಡುತ್ತ,
ಮಾಲಿಕನಾಗಲೆ
ಚಾಲಕನಾದನು
ಕೂಗುತ ಬೆಂಗ್ಳೂರ್ ಎನ್ನುತ್ತ.

ಮಕ್ಕಳು ಬಂದರು
ಅಕ್ಕರೆಯಿಂದಲಿ
ಹತ್ತಿದರೆಲ್ಲರು ಹರುಷದಲಿ,
ಗೋಪಿಯು ಕೂಡಲೆ
ಪೀಪಿಯ ಊದಿದ
ಹೊರಟಿತು ಗಾಡಿಯು ರಭಸದಲಿ.

ನಾಗನ ಹಳ್ಳಿಯು
ಬೇಗನೆ ಬಂದಿತು
ಇಳಿದನು ಟಾ ಟಾ ಮಾಡುತ್ತ,
ಮುಂದಿನ ಗೇಟಲಿ
ನಂದಿನಿ ಇಳಿದಳು
ನಡೆದಳು ಬೈ ಬೈ ಹೇಳುತ್ತ.

ನಿಲ್ಲುತ ನಡೆಯುತ
ಇಳಿಯುತ ಹತ್ತುತ
ನಲಿದರು ಮಕ್ಕಳು ಬಯಲಲ್ಲಿ ;
ಆಡುತ ಓಡುತ
ಎಳೆದೆಳೆದಾಡುತ
ಕುಣಿದರು ಅವರಿಗೆ ಭಯವೆಲ್ಲಿ?

ಶಾಲೆಯ ಬಯಲಿನ
ಕೆಲವೇ ಸುತ್ತಿಗೆ
ಬಸ್ಸಿನ ಆಟವು ಮುಗಿದಿತ್ತು ;
ಊಟವ ಮಾಡಿ
ಪಾಠವನೋದಲು
ಮಕ್ಕಳ ದಂಡು ನಡೆದಿತ್ತು.

ರಾತ್ರಿಯ ಕನಸಲು
ಪ್ರೀತಿಯ ಆಟದ
ಚಿತ್ರವೆ ಕಣ್ಣಲಿ ತುಂಬಿತ್ತು ;
ಮುದ್ದಿನ ಮಕ್ಕಳ
ಹಗ್ಗದ ಆಟವು
ಮನದಲಿ ಶಾಶ್ವತ ಉಳಿದಿತ್ತು.

- ಮಾಸ್ತಿ ಕೆ. ಆರ್. ಕೃಷ್ಣಪ್ಪ

**ಶಬ್ದಗಳ ಅರ್ಥ**

ಚಾಲಕ - ವಾಹನ ನಡೆಸುವವ ; ನುಗ್ಗು - ಮುನ್ನಡೆ ; ಪ್ರಯಾಣ - ಪ್ರವಾಸ ; ಮಾಲಿಕ - ಯಜಮಾನ ; ರಭಸ - ಜೋರಾಗಿ, ವೇಗವಾಗಿ ; ದಂಡು - ಗುಂಪು ; ಶಾಶ್ವತ - ಸ್ಥಿರವಾದ, ನಾಶವಿಲ್ಲದ

## ಅಭ್ಯಾಸ

ಪ್ರಶ್ನೆ ೧) ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.

ಅ) ಹಗ್ಗದ ಗಾಡಿಯು ಎಲ್ಲಿಗೆ ಓಡುತ್ತ ಬಂದಿತು?

ಆ) ಗಾಡಿಯು ರಭಸದಲ್ಲಿ ಯಾವಾಗ ಹೊರಟಿತು?

ಇ) ಗೋಪಿ ಮತ್ತು ನಂದಿನಿ ಎಲ್ಲಿ ಇಳಿದರು?

ಈ) ಮಕ್ಕಳು ಬಯಲಲ್ಲಿ ಹೇಗೆ ನಲಿದರು?

ಉ) ಆಟ ಮುಗಿದ ನಂತರ ಮಕ್ಕಳ ದಂಡು ಎಲ್ಲಿ ನಡೆದಿತ್ತು?

ಊ) ಮಕ್ಕಳ ಮನದಲ್ಲಿ ಶಾಶ್ವತವಾಗಿ ಏನು ಉಳಿದಿತ್ತು?

ಪ್ರಶ್ನೆ ೨) ಬಿಟ್ಟ ಸ್ಥಳ ತುಂಬಿ ಬರೆಯಿರಿ.

ಅ) ಮಾಲಿಕನಾಗಲೆ ..................ನಾದನು.

ಆ) ಗೋಪಿಯು ಕೂಡಲೇ .................... ಊದಿದ.

ಇ) ಪ್ರೀತಿಯ ಆಟದ ............ಕಣ್ಣಲಿ ತುಂಬಿತ್ತು.

ಪ್ರಶ್ನೆ ೩) ಹಗ್ಗದ ಆಟದಲ್ಲಿಯ ಮಕ್ಕಳ ಕ್ರಿಯೆಯನ್ನು ಬರೆಯಿರಿ.

ಪ್ರಶ್ನೆ ೪) ಈ ಪಾಠದಲ್ಲಿ ಬರುವ ಇಂಗ್ಲಿಷ ಶಬ್ದಗಳ ಪಟ್ಟಿ ಮಾಡಿರಿ.

ಪ್ರಶ್ನೆ ೫) ಕೆಳಗಿನ ಶಬ್ದಗಳಿಗೆ ಅದೇ ಅರ್ಥ ಕೊಡುವ ಒಂದೊಂದು ಶಬ್ದ ಬರೆಯಿರಿ.

ಮಾಲಿಕ, ಅಕ್ಕರೆ, ಹರುಷ, ಬೇಗನೆ

## ಉಪಕ್ರಮ

ಅ) ಈ ಕವಿತೆಯನ್ನು ಶಿಕ್ಷಕರ ಮಾರ್ಗದರ್ಶನದಲ್ಲಿ ಆಡಿ ತೋರಿಸಿರಿ.

ಆ) ಉಗಿಬಂಡಿಯ ಆಟವನ್ನು ಆಡಿ ಅಲ್ಲಿ ನಡೆಯುವ ಕ್ರಿಯೆಗಳನ್ನು ಅಭಿವ್ಯಕ್ತ ಪಡಿಸಿರಿ.

ಆಟ ಆಡು, ಪಾಠ ಓದು

* ಸಮಾನಾನುಭೂತಿ ಮತ್ತು ವ್ಯಕ್ತಿ-ವ್ಯಕ್ತಿಗಳಲ್ಲಿಯ ಸಹಸಂಬಂಧ ಮುಂತಾದ ಕೌಶಲಗಳು ವಿಕಾಸವಾಗುವವು.

# ೧೪. ಚಿಂತೆ



ಪ್ರಜೆಗಳ ಹಿತವೇ ತನ್ನ ಹಿತವೆಂದುಕೊಂಡಿದ್ದ ಒಬ್ಬ ರಾಜನು ತನ್ನ ಪ್ರಜೆಗಳು ಸುಖವಾಗಿರಲು ಹಗಲಿರುಳೂ ಶ್ರಮಿಸುತ್ತಿದ್ದನು. ನಿಜಕ್ಕೂ ಆತನ ರಾಜ್ಯಭಾರ ಅತ್ಯಂತ ಸಮರ್ಥವಾಗಿದ್ದು ಪ್ರಜೆಗಳು ಸುಖವಾಗಿದ್ದರು. ಒಮ್ಮೆ ರಾಜನು, ''ನಾನು ನನ್ನ ಪ್ರಜೆಗಳ ಹಿತದ ಬಗ್ಗೆ ಇಷ್ಟೊಂದು ಆಸಕ್ತಿ ವಹಿಸಿರುವಾಗ ಯಾರಿಗಾದರೂ ಯಾವ ತರದ ಚಿಂತೆಯಾದರೂ ಇರಲು ಸಾಧ್ಯವೆ?'' ಎಂದುಕೊಂಡನು. ಅಂತೆಯೇ ಅವನು ತನ್ನ ಮಂತ್ರಿಯನ್ನು ಕರೆದು, ''ನಮ್ಮ ರಾಜ್ಯದಲ್ಲಿ ಯಾರಿಗಾದರೂ ಚಿಂತೆ ಇದ್ದರೆ ಕರೆದು ತನ್ನಿರಿ. ನಾವು ಅವರ ಚಿಂತೆಯನ್ನು ದೂರ ಮಾಡೋಣ'' ಎಂದು ಹೇಳಿದನು.

''ಹೊಟ್ಟೆ ಬಟ್ಟೆಗೆ ಇದ್ದ ಮಾತ್ರಕ್ಕೆ ಜನರಿಗೆ ಚಿಂತೆ ಇಲ್ಲದೆ ಇರುವುದಿಲ್ಲ. ನಮ್ಮ ರಾಜ್ಯದಲ್ಲಿರುವವರಿಗೆಲ್ಲಾ, ಅಷ್ಟೇ ಏಕೆ ಈ ಭೂಮಂಡಲದಲ್ಲಿರುವವರಿಗೆಲ್ಲ ಒಂದಲ್ಲ ಒಂದು ಚಿಂತೆ ಇದ್ದೇ ಇರುತ್ತದೆ. ಪ್ರಜೆಗಳ ಹಿತಾಸಕ್ತಿಯ ಚಿಂತೆ ತಮಗಿಲ್ಲವೆ ಹಾಗೆ'' ಎಂದನು ಮಂತ್ರಿ.

ಸರಿ, ಮಂತ್ರಿಗೂ ರಾಜನಿಗೂ ವಾಗ್ವಾದ ನಡೆಯಿತು. ನಿಜಾಂಶ ಅರಿಯಲು ಮಂತ್ರಿಯೂ ರಾಜನೂ ವೇಷ ಬದಲಿಸಿ ರಾಜ್ಯ ಪರ್ಯಟನೆಗೆ ಹೊರಟರು.

ಕಂಡ ಕಂಡವರ ಬಳಿಯಲ್ಲೆಲ್ಲ ತಾವು ಮನೋವ್ಯಾಧಿಗೆ ಮದ್ದನ್ನು ಕೊಡುವ ಪಂಡಿತರೆಂದು ಹೇಳಿಕೊಳ್ಳುತ್ತ ಅವರ ಚಿಂತೆಗಳನ್ನು ಕೇಳಿ ತಿಳಿದುಕೊಳ್ಳಲಾರಂಭಿಸಿದರು.

ಒಬ್ಬ ವ್ಯಾಪಾರಿ ಬೇಕಾದಷ್ಟು ಸಂಪತ್ತಿದೆ. ಆದರೇನು ಪ್ರಯೋಜನ? ಇರುವ ಒಬ್ಬನೇ ಮಗನಿಗೆ ಹುಚ್ಚು. ಕುಳಿತಲ್ಲಿ ನಿಂತಲ್ಲಿ ಆ ಮಗನದೇ ಚಿಂತೆ, ವ್ಯಾಪಾರಿಗೆ.

ಇನ್ನೊಬ್ಬ ಗೃಹಸ್ಥ. ಉಣ್ಣಲು ಉಡಲು ಸಾಕಷ್ಟಿದೆ. ಮದುವೆಗೆ ಬೆಳೆದು ನಿಂತ ಮಗಳಿಗೆ ಕಾಯಿಲೆ. ಬೇಕಾದಷ್ಟು ಪ್ರಯತ್ನಿಸಿದರೂ ವರ ದೊರೆತಿಲ್ಲ. ತಂದೆ ತಾಯಿಗಳಿಗೆ ಆ ಮಗಳದೇ ಚಿಂತೆ.

ಮತ್ತೊಬ್ಬ ಕಡು ಬಡವ, ಕಾಡಿನಿಂದ ಸೌದೆ ತಂದು ಮಾರಿ ಬಂದ ಹಣದಿಂದ ಸಂಸಾರ ಸಾಗಬೇಕು. "ತನ್ನ ಜೀವನವೆಲ್ಲ ಹೀಗೆ ಕಷ್ಟದಲ್ಲೇ ಕಳೆದು ಹೋಗುವುದೇನೋ?" ಎಂಬ ಚಿಂತೆ ಅವನಿಗೆ.

ಹೀಗೆ ಯಾರನ್ನೇ ಕಂಡರೂ 'ಚಿಂತೆಯಿಲ್ಲ' ಎನ್ನುವ ಒಬ್ಬನೂ ಅವರಿಗೆ ಸಿಕ್ಕಲಿಲ್ಲ. ಕೊನೆಗೆ ಅವರು ಕಾಡಿನಲ್ಲಿ ಒಬ್ಬ ಸನ್ಯಾಸಿಯನ್ನು ಭೇಟಿಯಾದರು. ಸರ್ವಸಂಗ ಪರಿತ್ಯಾಗಿಗಳಾದ ಇವರಿಗೆ ಯಾವ ಚಿಂತೆಯೂ ಇರಲಾರದು ಎಂದುಕೊಂಡ ರಾಜ ಆ ಸಾಧುವನ್ನು ಕೇಳಿದನು.

'ದೇವರು ನನಗೆ ಮುಕ್ತಿಯನ್ನು ಕೊಡುತ್ತಾನೋ ಇಲ್ಲವೋ ಎಂಬುದೊಂದೇ ನನಗೆ ಚಿಂತೆ' ಎಂದನು ಆ ಸನ್ಯಾಸಿ. ರಾಜನಿಗೆ ಭ್ರಮನಿರಸನವಾಯಿತು. ಪ್ರಯಾಣ ನಿಲ್ಲಿಸಿ ಮಂತ್ರಿಯೊಡನೆ ರಾಜಧಾನಿಗೆ ಹಿಂದಿರುಗಿದನು.

*- ಎಂ. ಜಿ. ಗೋವಿಂದರಾಜು*

**ಶಬ್ದಗಳ ಅರ್ಥ**

ಸಮರ್ಥ - ಬಲಶಾಲಿ, ಶಕ್ತಿವಂತ ; ಶ್ರಮಿಸು - ಕಷ್ಟಪಡು ; ಮುಕ್ತಿ - ಹುಟ್ಟು ಸಾವುಗಳಿಂದ ಬಿಡುಗಡೆಯಾಗುವ ಅವಸ್ಥೆ ; ಪರ್ಯಟನೆ - ಸುತ್ತಾಡುವಿಕೆ, ತಿರುಗಾಡುವಿಕೆ ; ಮನೋವ್ಯಾಧಿ - ಒಳಬಳಗೇ ಚಿಂತೆಯಿಂದ ಕೊರಗುವ ರೋಗ, ಮಾನಸಿಕ ರೋಗ ; ಗೃಹಸ್ಥ - ಮದುವೆಯಾದವ ; ಭ್ರಮನಿರಸನ - ಭ್ರಾಂತಿ ನಾಶ

## ಅಭ್ಯಾಸ

ಪ್ರಶ್ನೆ ೧) ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.

ಅ) ಪ್ರಜೆಗಳು ಸುಖವಾಗಿರಬೇಕೆಂದು ರಾಜನು ಏನು ಮಾಡುತ್ತಿದ್ದನು?

ಆ) ರಾಜನು ಮಂತ್ರಿಯನ್ನು ಕರೆದು ಏನು ಹೇಳಿದನು?

ಇ) ಮಂತ್ರಿಯೂ ರಾಜನೂ ವೇಷ ಬದಲಿಸಿ ಎಲ್ಲಿಗೆ ಹೊರಟರು?

ಈ) ತಾವು ಎಂತಹ ಪಂಡಿತರೆಂದು ಮಂತ್ರಿ ಹಾಗೂ ರಾಜ ಹೇಳಿಕೊಳ್ಳತೊಡಗಿದರು?

ಉ) ಸನ್ಯಾಸಿ ಏನು ಹೇಳಿದನು?

ಪ್ರಶ್ನೆ ೨) ಕೆಳಗಿನ ಮಾತುಗಳನ್ನು ಯಾರು ಯಾರಿಗೆ ಹೇಳಿದರು?

ಅ) ನಮ್ಮ ರಾಜ್ಯದಲ್ಲಿ ಯಾರಿಗಾದರೂ ಚಿಂತೆ ಇದ್ದರೆ ಕರೆದು ತನ್ನಿ.

ಆ) ಹೊಟ್ಟೆ ಬಟ್ಟೆಗೆ ಇದ್ದ ಮಾತ್ರಕ್ಕೆ ಜನರಿಗೆ ಚಿಂತೆ ಇಲ್ಲದೇ ಇರುವುದಿಲ್ಲ.

ಇ) ಪ್ರಜೆಗಳ ಹಿತಾಸಕ್ತಿಯ ಚಿಂತೆ ತಮಗಿಲ್ಲವೆ?

ಈ) ದೇವರು ನನಗೆ ಮುಕ್ತಿಯನ್ನು ಕೊಡುತ್ತಾನೋ ಇಲ್ಲವೋ ಎಂಬುದೊಂದೇ ನನಗೆ ಚಿಂತೆ.

## ಉಪಕ್ರಮ

ಶಿಕ್ಷಕರ ಸಹಾಯದಿಂದ ಈ ಕಥೆಯನ್ನು ನಾಟಕವಾಗಿ ರೂಪಾಂತರಿಸಿ ಅಭಿನಯಿಸಿರಿ.

**ಚಿಂತೆಯೇ ಮುಪ್ಪು, ಸಂತೋಷವೇ ಯೌವನ**

* ಸಮಾನಾನುಭೂತಿ, ವ್ಯಕ್ತಿ-ವ್ಯಕ್ತಿಗಳಲ್ಲಿಯ ಸಹಸಂಬಂಧ ಹಾಗೂ ಮಾನಸಿಕ ಒತ್ತಡದ ಪರಿಹಾರ ಮುಂತಾದ ಕೌಶಲಗಳು ವಿಕಾಸವಾಗುವವು.

## ವ್ಯಾಕರಣ :

೧) ನಾಗೇಶನು ಮನೆಯಿಂದ ಶಾಲೆಗೆ ಹೊರಟನು.

೨) ಹಾಲಿನಿಂದ ಅನೇಕ ಪದಾರ್ಥಗಳು ತಯಾರಾಗುತ್ತವೆ.

ಮೇಲೆ ಗೆರೆ ಹೊಡೆದ ಶಬ್ದಗಳನ್ನು ಓದಿರಿ. ಈ ಶಬ್ದಗಳಿಗೆ 'ಇಂದ' ಪ್ರತ್ಯಯ ಸೇರಿದೆ. ಇದುವೇ ಪಂಚಮಿ ವಿಭಕ್ತಿಯಾಗಿದೆ. ಇದು ಅಗಲುವಿಕೆಯನ್ನು ಸೂಚಿಸುತ್ತದೆ.

೧) ರಾಮನ ತಂದೆಯ ಹೆಸರು ದಶರಥ.

೨) ರಾಧೆಯ ಗೆಳತಿಯರು ನೀರಿಗೆ ಹೊರಟಿದ್ದರು.

ಮೇಲೆ ಗೆರೆ ಹೊಡೆದ ಶಬ್ದಗಳನ್ನು ಓದಿರಿ. ಈ ಶಬ್ದಗಳಿಗೆ 'ಅ' ಪ್ರತ್ಯಯ ಸೇರಿದೆ. ಇದುವೇ ಷಷ್ಠಿ ವಿಭಕ್ತಿ.



# ೧೫. ತಾರೆಯ ಲೋಕಕೆ ಸಾಗೋಣ



ಬನ್ನಿರಿ ಗೆಳೆಯರೆ ಆಡೋಣ
ಹಾಡುತ ಕುಣಿಯುತ ನಲಿಯೋಣ ॥
ಓದಲು ಬರೆಯಲು ಕಲಿಯೋಣ
ಮೂಢತೆ ದೂರಕೆ ಅಟ್ಟೋಣ ।
ಬೆಳಕಿನ ಪಂಜನು ಹಿಡಿಯೋಣ
ಮುಸುಕಿದ ಕತ್ತಲೆ ಕಳೆಯೋಣ ॥
ಜ್ಞಾನದ ಕಣ್ಣನು ತೆರೆಯೋಣ
ಸತ್ಯದ ಪಥವನು ಹಿಡಿಯೋಣ ।
ಕಾಯಕ ದೇವರ ಮಾಡೋಣ
ಭೂಮಿಯೆ ಸ್ವರ್ಗವು ತೋರೋಣ ॥
ಹಳ್ಳಿಯ ಗೂಬೆಯ ಬೆಕ್ಕುಗಳ
ಶಕುನದ ಕಲ್ಪನೆ ಹೂಳೋಣ ।
ಯಂತ್ರದ ಮಂತ್ರದ ಮೋಡಿಗಳ
ತಂತ್ರದ ಜಾಲವ ಕಡಿಯೋಣ ॥
ಗಳಿಸಿದ ಜ್ಞಾನದ ಬಲದಿಂದ
ಮೇಲಕೆ ಮೇಲಕೆ ಏರೋಣ ।
ತಾರೆಯ ಲೋಕಕೆ ಸಾಗೋಣ
ಕೆಳಗಿನ ಮಂದಿಯು ಕರೆಯೋಣ ॥

\- ಎಂ. ಬಿ. ಲಿಂಗದಳ್ಳಿ

## ಶಬ್ದಗಳ ಅರ್ಥ

ಕಾಯಕ - ಕಾರ್ಯ, ಕೆಲಸ ; ಪಂಜು - ದೀವಟಿಗೆ ; ಮೂಢತೆ - ಅಜ್ಞಾನ ; ಅಟ್ಟೋಣ - ದೂಡೋಣ ; ಜಾಲ - ಬಲೆ

## ಅಭ್ಯಾಸ

**ಪ್ರಶ್ನೆ ೧) ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.**

ಅ) ಏನನ್ನು ದೂರಕ್ಕೆ ಅಟ್ಟೋಣ ಎಂದು ಕವಿ ಹೇಳುತ್ತಾನೆ?

ಆ) ಯಾವುದು ಸ್ವರ್ಗದಂತೆ ತೋರುವುದು?

ಇ) ಯಾವ ಜಾಲ ಕಡಿಯೋಣ ಎಂದು ಇಲ್ಲಿ ಹೇಳಲಾಗಿದೆ?

ಈ) ಯಾವುದರ ಬಲದಿಂದ ಮೇಲಕೆ ಮೇಲಕೆ ಏರೋಣ?

**ಪ್ರಶ್ನೆ ೨) ಹೊಂದಿಸಿ ಬರೆಯಿರಿ.**

| | |
|---|---|
| ೧) ಬೆಳಕಿನ ಪಂಜನು | ಅ) ಕರೆಯೋಣ |
| ೨) ಮುಸುಕಿದ ಕತ್ತಲೆ | ಆ) ಕಳೆಯೋಣ |
| ೩) ಶಕುನದ ಕಲ್ಪನೆ | ಇ) ಹೂಳೋಣ |
| ೪) ಕೆಳಗಿನ ಮಂದಿಯ | ಈ) ಹಿಡಿಯೋಣ |

**ಪ್ರಶ್ನೆ ೪) ಕೆಳಗಿನ ಪದ್ಯವನ್ನು ಪೂರ್ಣಗೊಳಿಸಿರಿ.**

ಹಳ್ಳಿಯ ..................................

..........................................

..........................................

.................... ಜಾಲವ ಕಡಿಯೋಣ ॥

## ಉಪಕ್ರಮ

**ಅ) 'ಣ' ಗುಣಿತಾಕ್ಷರದಿಂದ ಅಂತ್ಯವಾಗುವ ಶಬ್ದಗಳ ಪಟ್ಟಿ ತಯಾರಿಸಿರಿ.**

**ಆ) ಸಾಭಿನಯದೊಂದಿಗೆ ಈ ಕವಿತೆಯನ್ನು ಮಕ್ಕಳಿಂದ ಹಾಡಿಸಿರಿ.**

**ಇ) ಅಜ್ಞಾನದ ಅಂಧಕಾರವನ್ನು ತೊಲಗಿಸಲು ವಿಜ್ಞಾನವು ಹೇಗೆ ಪೂರಕವಾಗಿದೆ ಎಂಬುದನ್ನು ಮಕ್ಕಳಿಗೆ ತಿಳಿಸಿ ಹೇಳಿರಿ.**

ಅಜ್ಞಾನ ಅಳಿಸು, ವಿಜ್ಞಾನ ಬೆಳೆಸು

✱ ಚಿಕಿತ್ಸಾತ್ಮಕ ವಿಚಾರ ಮತ್ತು ಪರಿಣಾಮಕಾರಕ ಸಂಪರ್ಕ ಕೌಶಲಗಳು ವಿಕಾಸವಾಗುವವು.

## ೧೬. ಮೀರಾ ಬಹೆನ್

ಸ್ವಾತಂತ್ರ್ಯ ಹೋರಾಟಗಾರ್ತಿ, ಪಾಶ್ಚಾತ್ಯ ಸಂಗೀತ ಬಲ್ಲವಳು, ಗಾಂಧೀಜಿಯವರ ಮಗಳಂತೆ ಇದ್ದವಳು ಮೀರಾ ಬಹೆನ್. ಭಾರತದ ಅನೇಕ ಚಳುವಳಿಗಳಲ್ಲಿ ಭಾಗವಹಿಸಿದವರು. ವಿದೇಶದಲ್ಲಿ ಹುಟ್ಟಿದರೂ ಭಾರತ ದೇಶಕ್ಕಾಗಿಯೇ ತಮ್ಮ ಜೀವನವನ್ನು ಮುಡುಪಾಗಿಟ್ಟವರು.

ಇಂಗ್ಲೆಂಡಿನ ಸೇನಾಧಿಕಾರಿಯಾದ ಎಡ್ಮಂಡ ಸ್ಲೇಡರವರ ಮಗಳಾದ ಮ್ಯಾಡಲೀನ್ ಸ್ಲೇಡ್ ಭಾರತಕ್ಕೆ ಬಂದವರು. ಇಲ್ಲಿಯ ಆಕರ್ಷಣೆಯಿಂದ ಭಾರತದಲ್ಲಿಯೇ ಉಳಿದರು. ರೋಮನ್ ರೋಲಾರವರಿಂದ ಗಾಂಧೀಜಿಯವರ ಬಗೆಗೆ ತಿಳಿದ ಮ್ಯಾಡಲೀನ್ ಸ್ಲೇಡ್ ಸತ್ಯ, ಅಹಿಂಸೆ, ಸತ್ಯಾಗ್ರಹಗಳೆಡೆಗೆ ಆಕರ್ಷಿತರಾದರು.

ಗಾಂಧೀಜಿಯವರ ಆಶ್ರಮವನ್ನು ಸೇರಬಯಸಿ ಮೀರಾ ಪತ್ರ ಬರೆದಳು. ಇಂಗ್ಲಂಡಿನಲ್ಲಿದ್ದಾಗಲೂ ನೂಲುವುದು, ನೇಯುವುದು, ಸಸ್ಯಹಾರ ಸ್ವೀಕರಿಸುವುದು, ನಿರಾಡಂಬರ ಜೀವನ ನಡೆಸುವದನ್ನು ರೂಢಿಸಿಕೊಂಡಳು. ಉರ್ದು ಭಾಷೆಯನ್ನು ಸಹ ಕಲಿತಳು.

೧೯೨೫ ರಲ್ಲಿ ಮ್ಯಾಡಲೀನ್‌ಳಿಗೆ ಗಾಂಧೀಜಿಯವರಿಂದ ಅನುಮತಿ ಸಿಕ್ಕಿತು. ತಾಯಿ ತಂದೆಯವರನ್ನು ಒಪ್ಪಿಸಿ ಸಾಬರಮತಿ ಆಶ್ರಮ ಸೇರಿ ಕಠಿಣ ನಿಯಮಗಳನ್ನು ಅನುಸರಿಸಿದಳು. ಗಾಂಧೀಜಿ ಮತ್ತು ಕಸ್ತೂರಬಾ ಗಾಂಧಿಯವರು ಮ್ಯಾಡಲೀನ್‌ಳನ್ನು 'ಮೀರಾ' ಎಂದು ಕರೆದರು. ಮೀರಾಬಹೆನ್ ಎಂದು ಪ್ರಸಿದ್ಧಳಾದ ಮ್ಯಾಡಲೀನ್‌ಳಿಗೆ ಮೊದಲಿಗೆ ಆಶ್ರಮದ ಶೌಚಾಲಯಗಳನ್ನು ಶುದ್ಧವಾಗಿಡುವ ಜವಾಬ್ದಾರಿ ಬಂದಿತು. ಅದನ್ನು ನಿಷ್ಠೆಯಿಂದ ಮಾಡಿದ ಮೀರಾ ಬಹೆನ್ ದಂಡೀಯಾತ್ರೆಯಲ್ಲಿ ಪಾಲ್ಗೊಂಡಳು.

ಗಾಂಧೀಜಿಯವರಿಗೆ ಬರುವ ಪತ್ರಗಳ ವ್ಯವಹಾರವನ್ನು ಮೀರಾಬಹೆನ್ ನೋಡಿಕೊಂಡಳು. ಎರಡನೇ ದುಂಡು ಮೇಜಿನ ಪರಿಷತ್‌ಗಾಗಿ ಲಂಡನ್ನಿಗೆ ಭಾರತದ ನಿಯೋಗದೊಂದಿಗೆ ಹೋಗಿ ಬಂದರು. ಗಡಿನಾಡ ಗಾಂಧಿಯವರು ವಾಯವ್ಯ ಗಡಿಯಲ್ಲಿ ಆರಂಭಿಸಿದ ಗ್ರಾಮರಚನೆ ಕಾರ್ಯದಲ್ಲಿ ಸಹ ಮೀರಾ ಬಹೆನ್ ಪಾಲ್ಗೊಂಡರು.

೧೯೪೨ ರಲ್ಲಿ 'ಭಾರತ ಬಿಟ್ಟು ತೊಲಗಿ' ಎಂಬ ಚಳುವಳಿ ಆರಂಭವಾದಾಗ ಮೀರಾ ಬಹೆನ್ ಸಹ ಬಂಧಿತರಾದರು. ಆಗ ಅವರನ್ನು ಆಗಾಖಾನ್ ಸೆರೆಮನೆಯಲ್ಲಿಡಲಾಯಿತು.

ಇವರು ಅಲ್ಮೋರಾದ ಬಳಿ ಪಶುಲೋಕವನ್ನು ಆರಂಭಿಸಿ ಅದರ ನಿರ್ದೇಶಕರಾದರು. ಈ ಕೇಂದ್ರವು ವ್ಯವಸಾಯ ಗೋ ರಕ್ಷಣೆ ಮುಂತಾದ ಕಾರ್ಯಗಳನ್ನು ಮಾಡಿತು.

೧೯೪೮ ರಲ್ಲಿ ಮಹಾತ್ಮಾ ಗಾಂಧೀಜಿಯವರ ಹತ್ಯೆ ನಡೆದಾಗ ಮೀರಾಬಹೆನ್‌ರವರಿಗೆ ಬಹಳ ದುಃಖವಾಯಿತು. ಗಾಂಧೀಜಿಯವರ ಸ್ವರಾಜ್ಯದ ಕನಸನ್ನು ನನಸು ಮಾಡಲು ಮೀರಾಬಹೆನ್ ಶ್ರಮಿಸಿದರು. ಹಿಮಾಲಯದ ತಪ್ಪಲಲ್ಲಿಯೇ ತಮ್ಮ ಜೀವನದ ಬಹುಪಾಲು ಸಮಯವನ್ನು ಕಳೆದರು.

ಭಾರತಕ್ಕೆ ಬಂದು ಭಾರತದ ಆಕರ್ಷಣೆಯಿಂದ ತಪಸ್ವಿನಿಯಂತೆ ಜೀವಿಸಿ ತ್ಯಾಗ, ಸೇವೆ, ಹೋರಾಟಗಳಲ್ಲಿ ಪಾಲ್ಗೊಂಡ ಮೀರಾಬಹೆನ್ ೧೯೮೨ ರಲ್ಲಿ ನಿಧನರಾದರು. ಅವರು ಸ್ಥಾಪಿಸಿದ ಗೋ ರಕ್ಷಣಾ ಕೇಂದ್ರ ಈಗಲೂ ಕಾರ್ಯ ನಿರ್ವಹಿಸುತ್ತಿದೆ.

### ಶಬ್ದಗಳ ಅರ್ಥ

ವಿದೇಶ - ಪರದೇಶ ; ನಿರಾಡಂಬರ - ಸರಳ ; ಅಹಿಂಸೆ - ಹಿಂಸೆ ಮಾಡದೆ ಇರುವುದು ; ನಿಯೋಗ - ನಿಯಮಿಸಲ್ಪಟ್ಟ ; ಸ್ವರಾಜ್ಯ - ಸ್ವಂತ ರಾಜ್ಯ

### ಅಭ್ಯಾಸ

**ಪ್ರಶ್ನೆ ೧) ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.**

ಅ) ಮೀರಾ ಬಹೆನ್ ಗಾಂಧೀಜಿಯವರ ಆಶ್ರಮವನ್ನು ಸೇರಲು ಏಕೆ ಬಯಸಿದ್ದಳು?

ಆ) ಮೀರಾ ಬಹೆನ್‌ಳ ಮೊದಲಿನ ಹೆಸರು ಏನು?

ಇ) ಗಾಂಧೀಜಿಯವರ ಆಶ್ರಮದಲ್ಲಿ ಮೀರಾ ಬಹೆನ್ ಯಾವ ಕೆಲಸ ಮಾಡುತ್ತಿದ್ದಳು?

ಈ) ಮೀರಾ ಬಹೆನ್‌ಳನ್ನು ಸೆರೆಮನೆಯಲ್ಲಿ ಏಕೆ ಇಡಲಾಯಿತು?

ಉ) ಗೋವುಗಳ ಬಗ್ಗೆ ಮೀರಾ ಬಹೆನ್ ಮಾಡಿದ ಕೆಲಸಗಳಾವವು?

ಪ್ರಶ್ನೆ ೨) ಬಿಟ್ಟ ಸ್ಥಳ ತುಂಬಿರಿ.

ಅ) ಮೀರಾ ಬಹೆನ್ ಭಾರತದ ಅನೇಕ ..............ಗಳಲ್ಲಿ ಭಾಗವಹಿಸಿದಳು.

ಆ) ..........ರವರಿಂದ ಮೀರಾ ಬಹೆನ್ ಗಾಂಧೀಜಿಯವರ ಬಗ್ಗೆ ತಿಳಿದುಕೊಂಡಳು.

ಇ) ಗಾಂಧೀಜಿ ಮತ್ತು ಕಸ್ತೂರಬಾ ಗಾಂಧಿಯವರು ಮ್ಯಾಡಲಿನ್‌ಳನ್ನು ................ ಎಂದು ಕರೆದರು.

ಈ) ಮೀರಾ ಬಹೆನ್ .............ರಲ್ಲಿ ನಿಧನರಾದರು.

**ಪ್ರಶ್ನೆ ೩) ಕೆಳಗಿನವುಗಳಿಗೆ ಒಂದೊಂದು ಸಮಾನಾರ್ಥಕ ಶಬ್ದ ಬರೆಯಿರಿ.**

ಸತ್ಯ, ತಾಯಿ, ವ್ಯವಸಾಯ, ಹತ್ಯೆ, ಗೋವು

**ಪ್ರಶ್ನೆ ೪) ಕೆಳಗಿನ ಶಬ್ದಗಳಲ್ಲಿಯ ನಾಮಪದ ಮತ್ತು ಸರ್ವನಾಮಗಳನ್ನು ವಿಂಗಡಿಸಿ ಬರೆಯಿರಿ.**

ಮೀರಾ, ತಮ್ಮ, ಗಾಂಧೀಜಿ, ಅವರು, ತಾವು, ಆತ, ಒಕ್ಕಲಿಗ, ಅರಣ್ಯ, ಅವು, ಅದು, ಗುಡ್ಡ, ನೀನು, ನೀವು

**ಉಪಕ್ರಮ** * * * * * * * * * * * * * *

**ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಮಹಿಳೆಯರ ಬಗ್ಗೆ ಶಿಕ್ಷಕರಿಂದ ಮಾಹಿತಿ ಪಡೆಯಿರಿ.**

ಸ್ವಾತಂತ್ರ್ಯ ನಮ್ಮ ಜನ್ಮಸಿದ್ಧ ಹಕ್ಕು

* ಪರಿಣಾಮಕಾರಕ ಸಂಪರ್ಕ ಮತ್ತು ವ್ಯಕ್ತಿ-ವ್ಯಕ್ತಿಗಳಲ್ಲಿಯ ಸಹಸಂಬಂಧ ಜೀವನ ಕೌಶಲಗಳು ವಿಕಾಸವಾಗುವವು.

**ವ್ಯಾಕರಣ :**

೧) ಸೋಮನಲ್ಲಿ ಧೈರ್ಯ ಇರಲಿಲ್ಲ.

೨) ಗಿಡದಲ್ಲಿ ಮಾವಿನ ಹಣ್ಣುಗಳು ಚೆನ್ನಾಗಿ ಬೆಳೆದಿವೆ.


ಮೇಲೆ ಗೆರೆ ಹೊಡೆದ ಶಬ್ದಗಳನ್ನು ಓದಿರಿ. ಈ ಶಬ್ದಗಳಿಗೆ 'ಅಲ್ಲಿ' ಎಂಬ ವಿಭಕ್ತಿ ಪ್ರತ್ಯಯ ಸೇರಿದೆ. ಇದುವೇ ಸಪ್ತಮಿ ವಿಭಕ್ತಿ.

೧) ಪ್ರಜೆಗಳೇ, ಇನ್ನು ಮೇಲೆ ನೀವು ನಿಶ್ಚಿಂತೆಯಿಂದಿರಿ.

೨) ರಮೇಶನೇ, ನೀನು ಅತ್ತ ಕಡೆ ಹೋಗಬೇಡ.

ಮೇಲೆ ಗೆರೆ ಹೊಡೆದ ಶಬ್ದಗಳನ್ನು ಓದಿರಿ. ಈ ಶಬ್ದಗಳಿಗೆ 'ಏ' ಎಂಬ ವಿಭಕ್ತಿ ಪ್ರತ್ಯಯ ಸೇರಿದೆ. ಇದುವೇ ಸಂಬೋಧನ ವಿಭಕ್ತಿ.

# ೧೭. ಪುಣ್ಯ ನಗರ



ಸೌಮ್ಯ ಸುಂದರ ರಮ್ಯ ನಗರ
ನಮ್ಮ ಪ್ರಿಯ ಪುಣ್ಯ ನಗರ ॥
ಮುಳಾ ಮುಠಾ ನದಿ ಹರಿವ ನಗರ
ಸಹ್ಯಾದ್ರಿ ಬೆಟ್ಟ ಸುತ್ತಲಿರುವ ನಗರ ॥
ಮರಾಠಾ ಇತಿಹಾಸ ಬರೆದ ನಗರ
ಶಿವಾಜಿ ಮಹಾರಾಜರು ಬೆಳೆದ ನಗರ ॥
ದೇಶಪ್ರೇಮ ಬೀರುವ ನಗರ
ದೇಶ ನಾಯಕರ ಬೀಡು ಈ ನಗರ ॥
ಸವಿ ಮರಾಠಿ ನುಡಿವ ಸಭ್ಯರ ನಗರ
ವಿವಿಧ ಜನರು ಒಂದಾಗಿ ನೆಲೆಸಿರುವ ನಗರ॥
ಸಂಗೀತ ಶಾರದೆ ಹರಸಿದ ನಗರ
ಶ್ರೀಲಕ್ಷ್ಮಿ ಸದಾ ಒಲಿದ ನಗರ ॥
ನಶಿಸಬಾರದು ಈ ಸಿರಿನಗರ
ನಿರ್ಮಲವಾಗಿ ಉಳಿಯಬೇಕು ಈ ನಗರ॥

\- ಬಿ. ಲಲಿತಾರಾವ್

## ಶಬ್ದಗಳ ಅರ್ಥ

ರಮ್ಯ - ಮನೋಹರ ; ಬೀರು - ಹರಡು ; ನಶಿಸು - ನಾಶವಾಗು, ಅಳಿದುಹೋಗು

## ಅಭ್ಯಾಸ

**ಪ್ರಶ್ನೆ ೧) ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.**

ಅ) ಪುಣ್ಯ ನಗರದಲ್ಲಿ ಹರಿಯುವ ನದಿ ಯಾವುದು?

ಆ) ಪುಣ್ಯ ನಗರವು ಯಾರ ಇತಿಹಾಸ ಬರೆದ ನಗರ?

ಇ) ಪುಣ್ಯ ನಗರವನ್ನು ಯಾರು ಹರಸಿದ್ದಾರೆ?

ಈ) ಪುಣ್ಯ ನಗರ ಯಾರ ಬೀಡಾಗಿದೆ?

ಉ) ಕವಿತೆಯ ಆಧಾರದಿಂದ ಪುಣ್ಯ ನಗರದ ವರ್ಣನೆ ಮಾಡಿರಿ.

**ಪ್ರಶ್ನೆ ೨) ಹೊಂದಿಸಿ ಬರೆಯಿರಿ.**

| | |
|---|---|
| ಅ) ಸಹ್ಯಾದ್ರಿ | ೧) ಬೆಳೆದ ನಗರ |
| ಆ) ಶಿವಾಜಿ ಮಹಾರಾಜರು | ೨) ಒಂದಾಗಿ ನೆಲೆಸಿರುವ ನಗರ |
| ಇ) ದೇಶಪ್ರೇಮ | ೩) ಸದಾ ಒಲಿದ ನಗರ |
| ಈ) ವಿವಿಧ ಜನರು | ೪) ಬೀರುವ ನಗರ |
| ಉ) ಶ್ರೀಲಕ್ಷ್ಮಿ | ೫) ಬೆಟ್ಟ ಸುತ್ತಲಿರುವ ನಗರ |

## ಉಪಕ್ರಮ

**ಅ) ಈ ಕವಿತೆಯನ್ನು ಕಂಠಪಾಠ ಮಾಡಿರಿ.**

**ಆ) ಶಿಕ್ಷಕರ ಸಹಾಯದಿಂದ ಮಹಾರಾಷ್ಟ್ರದ ಇಂತಹ ಬೇರೆ ಬೇರೆ ಐತಿಹಾಸಿಕ ನಗರಗಳ ಪರಿಚಯ ಮಾಡಿಕೊಳ್ಳಿರಿ.**

ಚೆಂದ ನಮ್ಮ ನಾಡು ಒಮ್ಮೆ ಸುತ್ತಿ ನೋಡು

* ಸಮಾನಾನುಭೂತಿ ಕೌಶಲ ಬೆಳೆಯುವದು.

# ೧೮. ಎತ್ತಿನ ಹಾಲು



ಒಂದು ಬಾರಿ ಅಕ್ಬರ್ ಚಕ್ರವರ್ತಿ ತನ್ನ ರಾಣಿಯೊಂದಿಗೆ ಬೀರಬಲ್ಲನ ಬುದ್ಧಿವಂತಿಕೆ ಮತ್ತು ಅವನ ಸಮಯಕ್ಕೆ ತಕ್ಕ ಚಾತುರ್ಯದ ಬಗ್ಗೆ ಮಾತುಕತೆ ಆಡುತ್ತಿದ್ದನು. ಎಂತಹ ಕಷ್ಟ ತೊಡಕು ಸಮಸ್ಯೆಯನ್ನೇ ಆಗಲಿ ಬೀರಬಲ್ ಬಿಡಿಸಿ ಪರಿಹಾರ ಸೂಚಿಸಿ ಬಿಡುತ್ತಾನೆಂದು ಕೊಂಡಾಡಿದನು. ಚಕ್ರವರ್ತಿಯ ರಾಣಿ ಈ ಮಾತನ್ನು ಒಪ್ಪಿಕೊಳ್ಳದೆ ಬೀರಬಲ್ಲನನ್ನು ಹೇಗಾದರೂ ಮೂರ್ಖನನ್ನಾಗಿ ಮಾಡಬೇಕೆಂದು ನಿಶ್ಚಯಿಸಿಕೊಂಡು 'ಹಾಗಾದರೆ ನೋಡೋಣ, ನಿಮ್ಮ ಬೀರಬಲ್ಲನನ್ನು ಕರೆಯಿಸಿ ಎಲ್ಲಿಂದಲಾದರೂ 'ಎತ್ತಿನ ಹಾಲು' ತೆಗೆದುಕೊಂಡು ಬಾ ಅಂತ ತಿಳಿಸಿ' ಇದೇ ತಕ್ಕ ಸಮಯ, ಬುದ್ಧಿವಂತಿಕೆ ಪರೀಕ್ಷೆ ಮಾಡೋಕ್ಕೆ' ಎಂದು ತಿಳಿಸಿದಳು. ರಾಣಿಯ ಸಲಹೆ ಚಕ್ರವರ್ತಿಗೆ ವಿಚಿತ್ರವಾಗಿ ಕಂಡರೂ ವಿಧಿ ಇಲ್ಲದೆ ಬಾಯಿ ಮುಚ್ಚಿಕೊಂಡು ಸುಮ್ಮನಾದನು.

ಮಾರನೆಯ ದಿನ ಅಕ್ಬರ್ ಬೀರಬಲ್ಲನನ್ನು ಕರೆಯಿಸಿ, 'ನನಗೆ ಎತ್ತಿನ ಹಾಲು ಬೇಕಾಗಿದೆ. ಎಲ್ಲಿಂದಲಾದರೂ ತರಿಸಿಕೊಡು' ಎಂದನು. ಅದನ್ನು ಕೇಳಿಸಿಕೊಂಡು ಬೀರಬಲ್ಲನಿಗೆ ಆಶ್ಚರ್ಯವಾಗಿ 'ಮಹಾಸ್ವಾಮಿ, ಎತ್ತು

ಎಲ್ಲಾದ್ರೂ ಪ್ರಪಂಚದಲ್ಲಿ ಹಾಲು ಕೊಡುತ್ತದೆಯೇ?' ಎಂದು ಕೇಳಿದನು. ಆದರೆ ಅಕ್ಬರ್ ಚಕ್ರವರ್ತಿ ಅವನ ಮಾತನ್ನು ಕೇಳಿಸಿಕೊಳ್ಳದೆ, 'ಅದೆಲ್ಲಾ ಬೇಕಾಗಿಲ್ಲ, ಇನ್ನೊಂದು ವಾರದಲ್ಲಿ ಎಲ್ಲಿಂದಲಾದರೂ ಎತ್ತಿನ ಹಾಲು ತರಿಸಿ ಕೊಡು. ಆಗದೆ ಹೋದ್ರೆ ಇನ್ಮೇಲೆ ನನ್ನ ದರ್ಬಾರಿನಲ್ಲಿ ನಿನಗೆ ಕೆಲಸವಿಲ್ಲ, ನಿನ್ನನ್ನು ಮಂತ್ರಿ ಪದವಿಯಿಂದ ತೆಗೆದು ಹಾಕಿ ಬಿಡುತ್ತೇನೆ', ಎಂದು ಹೆದರಿಸಿದನು. ಏನೂ ತೋಚದೆ ಬೀರಬಲ್ ಹಿಂತಿರುಗಿದನು.

ಮನೆಗೆ ಹೋಗಿ ರಾತ್ರಿ ಮಲಗಿದಾಗಲೂ ಎತ್ತು ಹಾಲು ಕೊಡುತ್ತದೆಯೆ? ಎಂದು ಬೀರಬಲ್ ಹಾಸಿಗೆ ಮೇಲೆ ಒರಗಿ ಯೋಚಿಸತೊಡಗಿದನು. ತಂದೆ ಯೋಚಿಸುತ್ತಿರುವುದನ್ನು ಕಂಡು ಬೀರಬಲ್ಲನ ಮಗಳು ಚಿಂತೆಯ ಕಾರಣ ಕೇಳಿದಳು. ಚಕ್ರವರ್ತಿ ತನಗೆ ಹಾಕಿದ್ದ ಎತ್ತಿನ ಹಾಲಿನ ಶರತ್ತನ್ನು ಬೀರಬಲ್ ಮಗಳಿಗೆ ತಿಳಿಸಿದನು. ಮಗಳು ಗಟ್ಟಿಯಾಗಿ ನಕ್ಕು, 'ಎಲ್ಲಾದ್ರೂ ಎತ್ತು ಹಾಲನ್ನು ಕೊಡುತ್ತೇನಪ್ಪಾ?' ಎಂದು ಕೇಳಿದಳು. ಆಗ ಬೀರಬಲ್, 'ನಾನೂ ನಿನ್ನ ಹಾಗೆ ಕೇಳ್ದೇಮ್ಮ, ಆದರೆ ನನ್ನ ಗ್ರಹಚಾರ, ಚಕ್ರವರ್ತಿಗೇನು ತಲೆ ಕೆಟ್ಟಿದೆಯೊ ಏನೊ ತಿಳಿಯದು. ಇನ್ನು ನನ್ನನ್ನು ನನ್ನ ಪದವಿಯಿಂದ ತೆಗೆದು ಹಾಕಿದ್ರೆ ಜೀವನಕ್ಕೆ ಗತಿ ಏನು?' ವ್ಯಥೆಯಿಂದ ತಿಳಿಸಿದನು.

ತಂದೆಗೆ ಒದಗಿದ ಕಷ್ಟ ಕಂಡು ಮಗಳು ಚಿಂತಿಸತೊಡಗಿದಳು. ಕಡೆಗೆ ಬೀರಬಲ್ಲನ ತಲೆಗೆ ತಟ್ಟನೆ ಉಪಾಯವೊಂದು ಹೊಳೆಯಿತು. 'ನಿನ್ಹತ್ರ ನನ್ನ ಕಷ್ಟ ಹೇಳಿಕೊಂಡಿದ್ದು ಒಳ್ಳೇದೇ ಆಯ್ತು. ನಾನೊಂದು ಉಪಾಯ ಹೇಳಿ ಕೊಡ್ತೀನಿ. ಹಾಗೆ ನೀನು ಮಾಡು' ಎಂದು ತಿಳಿಸಿದನು. ಅದನ್ನು ಕೇಳಿಸಿಕೊಂಡು ಮಗಳು ಹಿಗ್ಗಿ ಒಪ್ಪಿಕೊಂಡಳು.

ಮಾರನೆಯ ದಿನ ಬೆಳಗಿನ ಜಾವಕ್ಕೆ ಮುಂಚೆ ಬೀರಬಲ್ಲನ ಮಗಳು ಮೈಲಿಗೆ ಬಟ್ಟೆಗಳ ಮೂಟೆಯನ್ನು ಹೊತ್ತುಕೊಂಡು ಯಮುನಾ ನದಿ ಕಡೆಗೆ ನಡೆದಳು. ಅಲ್ಲಿ ನದಿ ದಡದ ಮೇಲೆ ಒಂದು ಕಲ್ಲಿನ ಮೇಲೆ ಬಟ್ಟೆಯನ್ನು ರಪರಪನೆ ಬಡಿಯತೊಡಗಿದಳು.

ಚಕ್ರವರ್ತಿ ದಿನವೂ ಸೂರ್ಯನು ಹುಟ್ಟುವ ಹೊತ್ತಿಗೆ ನದಿಯ ತೀರದಲ್ಲಿ ವಾಯು ಸೇವನೆಗಾಗಿ ಅಡ್ಡಾಡುವ ಪದ್ಧತಿ. ಆ ದಿನವೂ ಚಕ್ರವರ್ತಿ ಆ ಕಡೆ

ಬಂದನು. ಬೆಳಗಾಗುವುದಕ್ಕೆ ಮುಂಚೆ ಬೀರಬಲ್ಲನ ಮಗಳು ಬಟ್ಟೆ ಒಗೆಯಲು ಬಂದುದೇಕ್ಕೆಂದು ಕಾರಣ ವಿಚಾರಿಸಿದನು. ಬೀರಬಲ್ಲನ ಮಗಳು, 'ಪ್ರಭು, ಈ ದಿನ ನಮ್ಮಪ್ಪ ಒಂದು ಗಂಡು ಮಗೂನ ಹೆತ್ತಿದ್ದಾನೆ. ಬಾಣಂತಿ ಮತ್ತು ಮಗುವಿನ ಮೂತ್ರದ ಬಟ್ಟೆಗಳೆಲ್ಲಾ ಇದ್ದವು. ಅದಕ್ಕೋಸ್ಕರ ಒಗೆದುಕೊಂಡು ಹೋಗೋಣ ಅಂತ ಬಂದೆ' ಎಂದಳು.

ಅವಳ ಉತ್ತರದಿಂದ ಅವನಿಗೆ ನಗು ಬಂದಿತು. ಇದೆಲ್ಲಾ ಬೀರಬಲ್ಲನ ಕಿತಾಪತಿಯೇ ಎಂದು ದೃಢವಾಯಿತು.

ಚಕ್ರವರ್ತಿಯು ನಗು ತಡೆದುಕೊಂಡು, 'ಗಂಡಸರು ಎಲ್ಲಾದ್ರೂ ಮಕ್ಕಳನ್ನು ಹೆರುತ್ತಾರೇನಮ್ಮಾ! ನೀನು ಹೇಳ್ತಾ ಇರೋದು ಬಹಳ ವಿಚಿತ್ರವಾಗಿದೆಯೆಲ್ಲಾ' ಎಂದನು. ಅಧೈರ್ಯ ಪಡದೆ ಆಕೆ 'ಯಾಕೆ ಹೆರಬಾರ್ದು ಪ್ರಭು, ಚಕ್ರವರ್ತಿ ಅಕ್ಬರನ ರಾಜ್ಯದಲ್ಲಿ ಎತ್ತೇ ಹಾಲನ್ನ ಕೊಡೋವಾಗ ಗಂಡಸರು ಮಕ್ಕಳನ್ನ ಹೆರೋದೇನು ವಿಚಿತ್ರ ಅಲ್ವಲ್ಲ!' ಎಂದಳು.

ಅಕ್ಬರನಿಗೆ ನಗು, ನಾಚಿಕೆ ಎರಡೂ ಒಟ್ಟಿಗೆ ಉಂಟಾದವು. ಬೀರಬಲ್ಲನ ಮಗಳ ಮಾತಿನ ಚಾತುರ್ಯ ಕಂಡು ಬೆರಗಾಗಿ 'ಎಷ್ಟಾದ್ರೂ ಬೀರಬಲ್ಲನ ಮಗಳು ಅಲ್ವೇನಮ್ಮ ನೀನು. ಬುದ್ಧೀಲಿ ಅಪ್ಪನನ್ನೇ ಮೀರಿಸಿದ್ದೀಯಾ' ಎಂದು ಹೊಗಳಿ ತನ್ನ ಕೊರಳಿನಲ್ಲಿದ್ದ ಸರವನ್ನು ಬಹುಮಾನವಾಗಿ ಕೊಟ್ಟು, 'ನಿಮ್ಮಪ್ಪ ಬೀರಬಲ್ಲನನ್ನು ದರ್ಬಾರಿಗೆ ಬರಹೇಳು' ಎಂದು ತಿಳಿಸಿದನು.

ಮಾರನೆಯ ದಿನ ಬೀರಬಲ್ ದರ್ಬಾರಿಗೆ ಬಂದಾಗ ಅಕ್ಬರ್ ಅವನ ಚಾತುರ್ಯ ಮೆಚ್ಚಿ, 'ರಾಣಿಯ ಮಾತು ಕೇಳಿಕೊಂಡು ನಿನ್ನ ಪರೀಕ್ಷೆ ಮಾಡಿದ್ದಕ್ಕೆ ತಕ್ಕ ಅವಮಾನ ಪಡೆದೆ' ಎಂದನು.

– *ಕುಂದಾನಿ ಸತ್ಯನ್*

### ಶಬ್ದಗಳ ಅರ್ಥ

ಚಾತುರ್ಯ – ಜಾಣತನ, ಚತುರತೆ ; ವಿಧಿ ಇಲ್ಲದೆ – ಪರಿಹಾರವಿಲ್ಲದೆ ; ಶರತ್ತು – ಕರಾರು ; ಗ್ರಹಚಾರ – ಗ್ರಹಗತಿಯಿಂದಾಗುವ ವಿಚಿತ್ರ ಘಟನೆಗಳು

## ಅಭ್ಯಾಸ

**ಪ್ರಶ್ನೆ ೧) ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.**

ಅ) ಅಕ್ಬರ ಬೀರಬಲ್ಲನನ್ನು ತನ್ನ ರಾಣಿಯ ಹತ್ತಿರ ಏನೆಂದು ಕೊಂಡಾಡಿದನು?

ಆ) ಅಕ್ಬರನ ರಾಣಿ ಬೀರಬಲ್ಲನನ್ನು ಹೇಗೆ ಮೂರ್ಖನನ್ನಾಗಿ ಮಾಡಬೇಕು ಎಂದು ನಿಶ್ಚಯಿಸಿದಳು?

ಇ) ಅಕ್ಬರನು ಬೀರಬಲ್ಲನಿಗೆ ಎಂತಹ ಹಾಲನ್ನು ತರಲು ಹೇಳಿದನು?

ಈ) ಬೀರಬಲ್ಲನ ಮಗಳು ಗಟ್ಟಿಯಾಗಿ ಏಕೆ ನಕ್ಕಳು?

ಉ) ಬೀರಬಲ್ಲನ ಮಗಳು ನದಿಗೆ ಏಕೆ ಬಂದಿದ್ದಳು?

ಊ) ಚಕ್ರವರ್ತಿಗೆ ಬೀರಬಲ್ಲನ ಮಗಳ ಮಾತು ಕೇಳಿ ಏಕೆ ನಗು ಬಂದಿತು?

ಋ) ಬೀರಬಲ್ಲನ ಮಗಳ ಬುದ್ಧಿವಂತಿಕೆಯ ಮಾತು ಕೇಳಿ ಅಕ್ಬರನು ಅವಳಿಗೆ ಏನು ಕೊಟ್ಟನು?

ೠ) ಅಕ್ಬರನಿಗೆ ಏಕೆ ಅವಮಾನವಾಯಿತು?

**ಪ್ರಶ್ನೆ ೨) ಬಿಟ್ಟ ಸ್ಥಳ ತುಂಬಿರಿ.**

ಅ) ರಾಣಿಯ ಸಲಹೆ ಚಕ್ರವರ್ತಿಗೆ ............ವಾಗಿ ಕಂಡಿತು.

ಆ) ನಿನ್ನನ್ನು ......................ದಿಂದ ತೆಗೆದು ಹಾಕಿ ಬಿಡುತ್ತೇನೆ.

ಇ) ತಂದೆಗೆ ಒದಗಿದ ಕಷ್ಟ ಕಂಡು ಮಗಳು ...................... .

ಈ) ಬೀರಬಲ್ಲನ ಮಗಳು ಮೈಲಿಗೆ ಬಟ್ಟೆಯನ್ನು ತೆಗೆದುಕೊಂಡು .................. ನದಿಯ ಕಡೆಗೆ ನಡೆದಳು.

ಉ) ನಮ್ಮಪ್ಪ ಒಂದು ............... ಮಗೂನ ಹೆತ್ತಿದ್ದಾನೆ.

**ಪ್ರಶ್ನೆ ೩) ಕೆಳಗಿನ ಮಾತುಗಳನ್ನು ಯಾರು ಯಾರಿಗೆ ಹೇಳಿದರು?**

ಅ) ಎತ್ತಿನ ಹಾಲು ತೆಗೆದುಕೊಂಡು ಬಾ ಅಂತ ತಿಳಿಸಿ.

ಆ) ಮಹಾಸ್ವಾಮಿ, ಎತ್ತು ಎಲ್ಲಾದ್ರೂ ಪ್ರಪಂಚದಲ್ಲಿ ಹಾಲು ಕೊಡುತ್ತದೆಯೆ?

ಇ) ಪ್ರಭು, ಈ ದಿನ ನಮ್ಮಪ್ಪ ಒಂದು ಗಂಡು ಮಗೂನ ಹೆತ್ತಿದ್ದಾನೆ.

ಈ) ನಿಮ್ಮಪ್ಪ ಬೀರಬಲ್ಲನನ್ನು ದರ್ಬಾರಿಗೆ ಬರ ಹೇಳು.

**ಪ್ರಶ್ನೆ ೪) ಕೆಳಗಿನ ಶಬ್ದಗಳನ್ನು ವಾಕ್ಯದಲ್ಲಿ ಉಪಯೋಗಿಸಿ ಬರೆಯಿರಿ.**

ಬುದ್ಧಿವಂತಿಕೆ, ಆಶ್ಚರ್ಯವಾಗು, ಮಂತ್ರಿಪದವಿ, ಚಿಂತಿಸತೊಡಗು

**ಉಪಕ್ರಮ** ❋ ❋ ❋ ❋ ❋ ❋ ❋ ❋ ❋ ❋ ❋ ❋ ❋ ❋ ❋

**ಬೀರಬಲ್ಲನ ಜಾಣತನದ ಇನ್ನೂ ಅನೇಕ ಕಥೆಗಳನ್ನು ಕೇಳಿ ತಿಳಿದುಕೊಳ್ಳಿರಿ.**

ಸಮಯಕ್ಕೊದಗುವ ಬುದ್ಧಿ ನಿಜವಾದ ಬುದ್ಧಿ

❋ ನಿರ್ಣಯ ಕ್ಷಮತೆ, ಸೃಜನಶೀಲ ವಿಚಾರ ಈ ಕೌಶಲಗಳು ವಿಕಾಸವಾಗುವವು.

**ವ್ಯಾಕರಣ :**

**ಪ್ರತ್ಯಯಗಳು**

ಮೂಲ ಧಾತುಗಳಿಗೆ ಅಥವಾ ಪ್ರಕೃತಿಗಳಿಗೆ ಪ್ರತ್ಯಯಗಳು ಸೇರಿ ಪದಗಳಾಗುತ್ತವೆ. ಪ್ರಕೃತಿಗಳಿಗೆ ವಿಭಕ್ತಿ, ಕೃದಂತ, ತದ್ಧಿತ, ಆಖ್ಯಾತ ಮುಂತಾದ ಪ್ರತ್ಯಯಗಳು ಸೇರುತ್ತವೆ.

೧) ೧೯೪೨ ರಲ್ಲಿ ಮೀರಾಬಹೆನ್ ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಿದ್ದರು.

೨) ಇಂಗ್ಲಿಷನಿಂದ ಕನ್ನಡಕ್ಕೆ ಅನುವಾದ ಮಾಡುವ ಕೆಲಸವು ಇವರಿಗೆ ಸಿಕ್ಕಿತು.

ಮೇಲಿನ ವಾಕ್ಯಗಳನ್ನು ಓದಿರಿ. ಚಳುವಳಿ, ಇಂಗ್ಲಿಷ, ಕನ್ನಡ, ಕೆಲಸ ಈ ಶಬ್ದಗಳಿಗೆ ಪ್ರತ್ಯಯಗಳು ಸೇರಿವೆ. ಈ ಬದಲಾವಣೆಗಳು ಮೂಲ ನಾಮಕ್ಕೆ ಪ್ರತ್ಯಯಗಳು ಸೇರಿ ಆಗಿವೆ.

# ೧೯. ಅಂಬಿಗ ನಾ ನಿನ್ನ ನಂಬಿದೆ

ಅಂಬಿಗ ನಾ ನಿನ್ನ ನಂಬಿದೆ । ಜಗ ।
ದಂಬಾರಮಣ ನಂಬಿದೆ ॥ಪ॥

ತುಂಬಿದ ಹರಿಗೋಲಂಬಿಗ । ಅದ ।
ಕೊಂಭತ್ತು ಛಿದ್ರವು ಅಂಬಿಗ ॥
ಸಂಭ್ರಮದಿಂ ನೋಡಂಬಿಗ । ಅದ ।
ರಿಂಬು ನೋಡಿ ನಡೆಸಂಬಿಗ ॥೧॥

ಹೊಳೆಯ ಭರವ ನೋಡಂಬಿಗ । ಅದಕೆ ।
ಸೆಳವು ಘನವಯ್ಯ ಅಂಬಿಗ ॥
ಸುಳಿಯೊಳು ಮುಳುಗಿದೆ ಅಂಬಿಗ । ಎನ್ನ ।
ಸೆಳೆದುಕೊಂಡೊಯ್ಯೊ ನೀನಂಬಿಗ ॥೨॥

ಆರು ತೆರೆಯ ನೋಡಂಬಿಗ । ಅದು ।
ಮೀರಿ ಬರುತಲಿದೆ ಅಂಬಿಗ ॥
ಯಾರಿಂದಲಾಗದು ಅಂಬಿಗ । ಅದ ನಿ ।
ವಾರಿಸಿ ದಾಟಿಸೊ ಅಂಬಿಗ ॥೩॥

ಸತ್ಯವೆಂಬುದು ಹುಟ್ಟಂಬಿಗ । ಸದಾ ।
ಭಕ್ತಿಯೆಂಬುದೆ ಪಥವಂಬಿಗ ॥
ನಿತ್ಯಮೂರುತಿ ಪುರಂದರವಿಠ್ಠಲ । ನಮ್ಮ ।
ಮುಕ್ತಿಮಂಟಪಕೊಯ್ಯೊ ಅಂಬಿಗ ॥೪॥

– *ಪುರಂದರದಾಸರು*

**ಶಬ್ದಗಳ ಅರ್ಥ**

ಛಿದ್ರ – ತೂತು ; ಸಂಭ್ರಮ – ಸಡಗರ ; ಇಂಬು – ಸ್ಥಳ, ಜಾಗ ; ಭರ – ವೇಗ, ರಭಸ ; ಘನ – ದೊಡ್ಡದು ; ಅಂಬಿಗ – ದೋಣಿ ನಡೆಸುವವ, ನಾವಿಕ

## ವಿಶೇಷ ವಿಚಾರ

**ಹರಿಗೋಲು** - ತೆಪ್ಪ , ನದಿಯನ್ನು ದಾಟಿಸುವ ಸಾಧನ, ದೋಣಿ

**ಜಗದಂಬಾರಮಣ** - ಜಗದಂಬೆ (ಲಕ್ಷ್ಮೀ)ಯ ರಮಣ (ಪತಿ) - ವಿಷ್ಣು

**ಆರು ತೆರೆ** - ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ಸರಗಳೆಂಬ ಆರು ವೈರಿಗಳು

**ಒಂಭತ್ತು ಛಿದ್ರಗಳು** - ಶರೀರದಲ್ಲಿಯ ನವ ದ್ವಾರಗಳು

## ಅಭ್ಯಾಸ

**ಪ್ರಶ್ನೆ ೧) ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.**

ಅ) ಪುರಂದರದಾಸರು ಯಾರನ್ನು ನಂಬಿದೆ ಎಂದು ಹೇಳುತ್ತಾರೆ?

ಆ) ತುಂಬಿದ ಹರಿಗೋಲಿಗೆ ಎಷ್ಟು ಛಿದ್ರಗಳಿವೆ?

ಇ) ಪುರಂದರದಾಸರು ಯಾವುದು ಘನವೆಂದು ಹೇಳುತ್ತಾರೆ?

ಈ) ಏನನ್ನು ದಾಟಿಸಲು ಈ ಕೀರ್ತನೆಯಲ್ಲಿ ಹೇಳಲಾಗಿದೆ?

ಉ) ಪುರಂದರ ವಿಠ್ಠಲನನ್ನು ಎಲ್ಲಿಗೆ ಒಯ್ಯೆಂದು ದಾಸರು ಕೇಳಿಕೊಳ್ಳುತ್ತಾರೆ?

ಊ) ಪುರಂದರದಾಸರ ಅಂಕಿತನಾಮವೇನು?

**ಪ್ರಶ್ನೆ ೨) ಹೊಂದಿಸಿ ಬರೆಯಿರಿ.**

| 'ಅ' ಗುಂಪು | 'ಬ' ಗುಂಪು |
|---|---|
| ಅ) ಒಂಭತ್ತು | ೧) ಭರ |
| ಆ) ಹೊಳೆ | ೨) ಮಂಟಪ |
| ಇ) ಆರು | ೩) ಛಿದ್ರ |
| ಈ) ಮುಕ್ತಿ | ೪) ತೆರೆ |

**ಪ್ರಶ್ನೆ ೩) ಕೆಳಗಿನ ಪದ್ಯವನ್ನು ಪೂರ್ಣಗೊಳಿಸಿರಿ.**

ಆರು ತೆರೆಯ ..........................

.........................................

.........................................

.................. ದಾಟಿಸೊ ಅಂಬಿಗ.

ಅ) ಈ ಕವಿತೆಯನ್ನು ನಿಮ್ಮ ಶಾಲೆಯ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಸಾಭಿನಯದೊಂದಿಗೆ ಹಾಡಿರಿ.


ಆ) ಕನಕದಾಸರು, ವ್ಯಾಸರಾಯರು, ಶ್ರೀಪಾದರಾಯರು, ಜಗನ್ನಾಥದಾಸರು, ವಿಜಯದಾಸರು, ಪ್ರಸನ್ನ ವೆಂಕಟದಾಸರು ಮುಂತಾದ ದಾಸರ ಜೀವನ ಹಾಗೂ ಕೀರ್ತನೆಗಳನ್ನು ಮಕ್ಕಳಿಗೆ ಪರಿಚಯ ಮಾಡಿಕೊಡಿರಿ.

## ಭಕ್ತಿಯೇ ಮುಕ್ತಿಗೆ ಸೋಪಾನ

ಸ್ವತಃದ ಅರಿವು, ಸೃಜನಶೀಲ ವಿಚಾರ ಕೌಶಲಗಳು ಮಕ್ಕಳಲ್ಲಿ ವಿಕಾಸಗೊಳ್ಳುವವು.



# ೨೦. ಲಾಲ್‌ಬಾಗ್



(ಚರ್ಚಾಕೂಟದಲ್ಲಿ ಭಾಗವಹಿಸಲು ಮಕ್ಕಳು ಶಾಲೆಯ ಆವರಣದಲ್ಲಿ ಸೇರಿದ್ದರು.)

**ಮಕ್ಕಳು** : (ಎಲ್ಲರೂ ಎದ್ದು ನಿಂತು ಗುರುಗಳಿಗೆ ನಮಸ್ಕಾರ ಮಾಡಿದರು.)

**ಗುರುಗಳು** : ಕುಳಿತುಕೊಳ್ಳಿರಿ. ನಾವೆಲ್ಲ ಕೂಡಿ ಒಂದು ಚರ್ಚಾಕೂಟದಲ್ಲಿ ಭಾಗವಹಿಸೋಣ ಮಕ್ಕಳೇ. ಆಗಲಿ ಗುರುಗಳೇ, (ಎಂದು ಎಲ್ಲರೂ ಕುಳಿತುಕೊಂಡರು) ರಮೇಶ, ನೀನು ಕಳೆದ ರಜೆಯಲ್ಲಿ ಯಾವ ಊರಿಗೆ ಹೋಗಿದ್ದೆ?

ರಮೇಶ : ಗುರುಗಳೇ, ನಾನು ಚಿಕ್ಕಪ್ಪನ ಊರಿಗೆ ಹೋಗಿದ್ದೆನು.

ಗುರುಗಳು : ಹೌದಾ, ನಿಮ್ಮ ಚಿಕ್ಕಪ್ಪ ಎಲ್ಲಿ ಇರುತ್ತಾರೆ?

ರಮೇಶ : ಬೆಂಗಳೂರಿನಲ್ಲಿ.

ಹುಸೇನ : (ಅಷ್ಟರಲ್ಲಿ ಹುಸೇನ ಎದ್ದು ನಿಂತು) ನಾನು ಬೆಂಗಳೂರಿನಲ್ಲಿರುವ ಅತೀ ದೊಡ್ಡ ಉದ್ಯಾನ ನೋಡಿದ್ದೇನೆ.

ಕಮಲೆ : ಬೆಂಗಳೂರು ಅಂದ ತಕ್ಷಣ ಲಾಲ್‌ಬಾಗ್ ನೆನಪಿಗೆ ಬರುತ್ತದೆ.

ಗುರುಗಳು : ಶಹಬ್ಬಾಸ್ ಕಮಲೆ ! ಹಾಗಾದರೆ ಇಂದು ನಾವು ಲಾಲ್‌ಬಾಗದ ಕುರಿತು ಚರ್ಚಾಕೂಟ ಏರ್ಪಡಿಸೋಣ.

ಮಕ್ಕಳು : (ಅತೀ ಉತ್ಸಾಹದಿಂದ) ಎಲ್ಲರೂ ಲಾಲ್‌ಬಾಗದ ಕುರಿತು ತಿಳಿದುಕೊಳ್ಳುವ ಆಸಕ್ತಿ ಇದೆ ಗುರುಗಳೇ ಎಂದರು.

ಗುರುಗಳು : ಬೆಂಗಳೂರು ಇದು ಕರ್ನಾಟಕ ರಾಜ್ಯದ ರಾಜಧಾನಿಯಾಗಿದೆ. ಅಷ್ಟೇ ಅಲ್ಲ ಬೆಂಗಳೂರು ಇದು ಉದ್ಯಾನಗಳ ನಗರವೆಂದು ಪ್ರಸಿದ್ಧಿ ಪಡೆದಿದೆ.

ಮೇರಿ : ಗುರುಗಳೇ, ಬೆಂಗಳೂರು ಉದ್ಯಾನಗಳ ನಗರವೆಂದು ಏಕೆ ಪ್ರಸಿದ್ಧಿ ಪಡೆದಿದೆ?

ಗುರುಗಳು : ಮೇರಿ ಒಳ್ಳೆಯ ಪ್ರಶ್ನೆ ವಿಚಾರಿಸಿದೆ. ಏಕೆಂದರೆ ಮಳೆಯ ಪ್ರಮಾಣ ಮತ್ತು ಒಳ್ಳೆಯ ಹವಾಮಾನ ಇವು ಉದ್ಯಾನಗಳಿಗೆ ಅವಶ್ಯವಾಗಿ ಬೇಕಾಗುವ ಮುಖ್ಯ ಘಟಕಗಳಾಗಿವೆ. ಇವೆಲ್ಲ ಬೆಂಗಳೂರಿನಲ್ಲಿರುವುದರಿಂದ ಉದ್ಯಾನಗಳು ಬೆಳೆದಿವೆ.

ಕಮಲೆ : ಲಾಲ್‌ಬಾಗನ್ನು ಯಾರು ರಚಿಸಿದರು?

ಗುರುಗಳು : ಒಮ್ಮೆ ಮೈಸೂರಿನ ಸುಲ್ತಾನನಾಗಿದ್ದ ಹೈದರಾಲಿಯು ಕ್ರಿ.ಶ. ೧೭೭೦ ರಲ್ಲಿ ಫ್ರೆಂಚರ ಕಾಲೋನಿಯಾಗಿದ್ದ ಪಾಂಡಿಚೇರಿಗೆ ಹೋಗಿದ್ದಾಗ ಅಲ್ಲಿಯ ಉದ್ಯಾನ ನೋಡಿ ಈ ರೀತಿ ಬೆಂಗಳೂರಿನಲ್ಲಿಯೂ ಏಕೆ ಸೃಷ್ಟಿಯಾಗಬಾರದು ಎನ್ನುವ ವಿಚಾರ ಅವನ ಮನದಲ್ಲಿ ಮೂಡಿತು.

ಶಂತನು : ಹೈದರಾಲಿಯು ಏಕೆ ಮನದಲ್ಲಿ ಉದ್ಯಾನದ ವಿಚಾರ ಮಾಡಿದನು?

ಗುರುಗಳು : ಶಂತನು ನೋಡು, ಒಬ್ಬೊಬ್ಬರು ಒಂದೊಂದು ರೀತಿಯಲ್ಲಿ ನಿಸರ್ಗ ಪ್ರೇಮಿಗಳಾಗಿರುತ್ತಾರೆ. ಅದೇ ತರಹ ಹೈದರಾಲಿಯು ಅಲ್ಲಿಯ ಹಸಿರು ವಾತಾವರಣ, ಹೂವಿನ ಸುಗಂಧ ನೋಡಿ

ಅವನಿಗೂ ಸಹ ಬೆಂಗಳೂರಿನಲ್ಲಿ ಇದೇ ರೀತಿ ಉದ್ಯಾನ ತಯಾರಿಸುವ ಯೋಚನೆ ಬಂದಿರಬೇಕು.

ಕಮಲೆ : ಗುರುಗಳೆ, ಲಾಲ್‌ಬಾಗದ ಸವಿಸ್ತಾರ ಮಾಹಿತಿ ನೀಡಿರಿ.

ಗುರುಗಳು : ಲಾಲ್‌ಬಾಗದ ಒಟ್ಟು ವಿಸ್ತೀರ್ಣ ೨೪೦ ಎಕರೆ. ಅಂದು ತೋಟಗಾರಿಕೆ ಇಲಾಖೆಯ ನಿರ್ದೇಶಕರಾಗಿದ್ದ ಎಮ್. ಎಚ್. ಮರಿಗೌಡರು ಅದರ ಅಭಿವೃದ್ಧಿಗಾಗಿ ಶ್ರಮಿಸಿದರು. ಮುಂದೆ ಇಲಾಖೆಯ ಇತರ ಅಧಿಕಾರಿಗಳು ಅದನ್ನು ನಾನಾ ವಿಭಾಗದಲ್ಲಿ ವಿಭಾಗಿಸಿದರು.

ಹುಸೇನ : ಗುರುಗಳೆ, ಲಾಲ್‌ಬಾಗದಲ್ಲಿ ಏನೇನು ಇವೆ?

ಗುರುಗಳು : ಈ ಉದ್ಯಾನದಲ್ಲಿ ವಿವಿಧ ಬಗೆಯ ಹೂವಿನ ಗಿಡಗಳಿವೆ. ಅಷ್ಟೇ ಅಲ್ಲ, ವರ್ಷದ ಎಲ್ಲ ಕಾಲಗಳಲ್ಲಿ ವಿವಿಧ ಬಣ್ಣದ ಹೂವುಗಳು ಅಲ್ಲಿ ಕಂಡುಬರುತ್ತವೆ.

ಗುರುಗಳು : ಕಮಲೆ, ನೀನು ಲಾಲ್‌ಬಾಗ್‌ದ ಯಾವ ಭಾಗ ನೋಡಿರುವಿ?

ಕಮಲೆ : ಹೌದು ಗುರುಗಳೆ, ಅಲ್ಲಿ ಗುಲಾಬಿ ವನ, ಮಲ್ಲಿಗೆ ವನ, ತಾವರೆ ಕೊಳ, ಸಣ್ಣ ಮೃಗಾಲಯ, ಜಿಂಕೆ ಉದ್ಯಾನ ಮುಂತಾದ ವಿಭಾಗಗಳು ಇವೆ ಗುರುಗಳೆ.

ಗುರುಗಳು : ಮಕ್ಕಳೆ, ಕಮಲೆ ಹೇಳಿದ ಮಾಹಿತಿ ನೀವೆಲ್ಲ ಕೇಳಿದಿರಲ್ಲವೆ?

ಮಕ್ಕಳು : ಹೌದು ಗುರುಗಳೇ (ಎಂದು ಮಕ್ಕಳು ಉದ್ಗಾರ ತೆಗೆದರು).

ರಮೇಶ : ಗುರುಗಳೇ, ಮತ್ತೆ ನೋಡುವಂಥದ್ದು ಅಲ್ಲಿ ಏನಿದೆ?

ಗುರುಗಳು : ವಿಶ್ವದ ನಾನಾ ಮೂಲೆಗಳಿಂದ ತಂದು ಬೆಳೆಸಿದ ಸಸ್ಯಗಳಿಂದ ಈ ಉದ್ಯಾನವು ಇಂದು ಜಗತ್ಪ್ರಸಿದ್ಧವಾಗಿದೆ. ಇಲ್ಲಿನ ವಿಶೇಷ ಆಕರ್ಷಣೆ ಎಂದರೆ ಇಳಿಜಾರು ಭಾಗದಲ್ಲಿ ಗಡಿಯಾರವನ್ನು ಕೂಡಿಸಲಾಗಿದೆ. ಅದರ ಸುತ್ತಲು ಪುಷ್ಪಾಲಂಕಾರ ಮಾಡಿದ್ದಾರೆ. ಕೆಳಗಡೆ ಯಂತ್ರವನ್ನು ಕೂಡಿಸಲಾಗಿದೆ. ಒಟ್ಟಿನಲ್ಲಿ ಬೆಂಗಳೂರಿನ ಲಾಲ್‌ಬಾಗ್ ಉದ್ಯಾನವು ಎಲ್ಲರ ಮನ ಸೆಳೆಯುತ್ತದೆ ಮತ್ತು

ಮುದಗೊಳಿಸುತ್ತದೆ. ಲಾಲ್‌ಬಾಗನ್ನು ಒಮ್ಮೆ ನೋಡಿದರೆ ಮರೆಯಲು ಸಾಧ್ಯವಿಲ್ಲ. ಮತ್ತೊಮ್ಮೆ ನೋಡುವಂತೆ ಮನ ಆ ಕಡೆ ಆಕರ್ಷಣೆಯಾಗುತ್ತದೆ. ಇದೇ ರೀತಿ ಬೆಂಗಳೂರಿನಲ್ಲಿ ಕಬ್ಬನ್ ಪಾರ್ಕ್, ಭಾಷ್ಯಂ ಪಾರ್ಕ್, ನೆಹರೂ ಪಾರ್ಕ್, ಕೃಷ್ಣರಾವ್ ಪಾರ್ಕ್ ಮುಂತಾದ ಸುಂದರವಾದ ಉದ್ಯಾನಗಳಿವೆ. ಸರಿ. ಇಂದು ಇಷ್ಟು ಚರ್ಚೆ ಸಾಕು. ನೀವೆಲ್ಲರೂ ನಿಮ್ಮ ನಿಮ್ಮ ವರ್ಗಗಳಿಗೆ ಹೋಗಿರಿ.

(ಎಲ್ಲರೂ ಹೋಗುವರು.)

**ಶಬ್ದಗಳ ಅರ್ಥ**

ಚರ್ಚಾಕೂಟ - ಮುಕ್ತವಾಗಿ ಮಾತನಾಡುವ ಸಭೆ ; ಉತ್ಸಾಹ - ಆನಂದ ; ಅಭಿರುಚಿ - ಆಸೆ ; ಸುಗಂಧ - ಒಳ್ಳೆಯ ವಾಸನೆ ; ವಿಭಾಗಿಸು - ಭಾಗ ಮಾಡು ; ಮುದಗೊಳಿಸು - ಹಿತವೆನಿಸು

**ಅಭ್ಯಾಸ**

**ಪ್ರಶ್ನೆ ೧) ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.**

ಅ) ಮಕ್ಕಳೆಲ್ಲ ಯಾವುದರಲ್ಲಿ ಭಾಗವಹಿಸಿದ್ದರು?

ಆ) ಹೈದರಾಲಿಯು ಪಾಂಡಿಚೇರಿಗೆ ಹೋದಾಗ ಏನನ್ನು ಕಂಡನು?

ಇ) ಲಾಲ್‌ಬಾಗ್ ಉದ್ಯಾನವನ್ನು ಯಾರು ಅಭಿವೃದ್ಧಿಗೊಳಿಸಿದರು?

ಈ) ಲಾಲ್‌ಬಾಗ್ ಉದ್ಯಾನದ ವಿವರವನ್ನು ಯಾರು ಹೇಳಿದರು?

ಉ) ಲಾಲ್‌ಬಾಗ್ ಉದ್ಯಾನದ ವನಗಳ ಮಾಹಿತಿ ಯಾರು ನೀಡಿದರು?

**ಪ್ರಶ್ನೆ ೨) ಕೆಳಗಿನ ಮಾತುಗಳನ್ನು ಯಾರು ಯಾರಿಗೆ ಹೇಳಿದರು?**

ಅ) ಗುರುಗಳೇ, ನಾನು ಚಿಕ್ಕಪ್ಪನ ಊರಿಗೆ ಹೋಗಿದ್ದೆನು.

ಆ) ಬೆಂಗಳೂರು ಇದು ಕರ್ನಾಟಕದ ರಾಜಧಾನಿಯಾಗಿದೆ.

ಇ) ಲಾಲ್‌ಬಾಗ ಯಾರು ರಚಿಸಿದರು?

ಈ) ಕಮಲೆ, ನೀನು ಲಾಲ್‌ಬಾಗ್‌ದ ಯಾವ ಭಾಗ ನೋಡಿರುವಿ?

ಉಪಕ್ರಮ * * * * * * * * * * * * * *


(ಅ) ಉದ್ಯಾನದಲ್ಲಿರುವ ಅನೇಕ ವನಸ್ಪತಿ ಔಷಧಿಗಳ ಮಾಹಿತಿ ಶಿಕ್ಷಕರಿಂದ ತಿಳಿದುಕೊಳ್ಳಿರಿ.

(ಆ) ಬೇರೆ ಬೇರೆ ಸ್ಥಳಗಳಲ್ಲಿರುವ ಸುಂದರ ಉದ್ಯಾನಗಳ ಬಗ್ಗೆ ಹೆಚ್ಚಿನ ಮಾಹಿತಿಯನ್ನು ಮಕ್ಕಳಿಗೆ ಹೇಳಿರಿ.

ಹೂ, ಗಿಡಗಳ ಸುಂದರ ಉದ್ಯಾನ
ಮನ ಮುದಗೊಳಿಸುವ ಆನಂದದ ಕ್ಷಣ

* ಪರಿಣಾಮಕಾರಕ ಸಂಪರ್ಕ, ಸೃಜನಶೀಲ ವಿಚಾರ, ಚಿಕಿತ್ಸಾತ್ಮಕ ವಿಚಾರ ಕೌಶಲಗಳು ಬೆಳೆಯುವವು.














ಮಹಾರಾಷ್ಟ್ರ ರಾಜ್ಯ ಪಾಠ್ಯಪುಸ್ತಕ ನಿರ್ಮಿತಿ ಹಾಗೂ ಅಭ್ಯಾಸಕ್ರಮ ಸಂಶೋಧನ ಮಂಡಳ, ಪುಣೆ.

सुगमभारती कन्नड इ.८वी

Rs:15.00